
ದೆಹಲಿ ಕರ್ನಾಟಕ ಸಂಘದ

# ಅಭಿಮತ

ಅಕ್ಟೋಬರ್ 2018
ಬೆಲೆ ರೂ. 1

29 ನೇ ಸಂಪುಟಕ್ಕೆ



## ಮಹಾತ್ಮ ಗಾಂಧಿಯವರ 150ನೇ ಜನ್ಮದಿನಾಚರಣೆ

# ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ

**ಸಂಪುಟ 29 ಸಂಚಿಕೆ 1**
**ಅಕ್ಟೋಬರ್ 2018, ಬೆಲೆ ರೂ. 1**


## ನೇರ ಮಾತು

ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಕಾರ್ಯಗಳು ಹಲವು ದಶಕಗಳಿಂದ ನಡೆದುಕೊಂಡು ಬಂದಿವೆ. ದೆಹಲಿ ಕರ್ನಾಟಕ ಸಂಘ, ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಾರ್ತಾ ಮತ್ತು ಪ್ರಚಾರ ಇಲಾಖೆ, ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿರುವ ಕನ್ನಡ ಭಾಷಾ ಅಧ್ಯಯನ ಪೀಠ ಮುಂತಾದ ಸಂಘ ಸಂಸ್ಥೆಗಳು ಹಲವು ಸಾಂಸ್ಕೃತಿಕ ಹಾಗೂ ವೈಚಾರಿಕ ಕಾರ್ಯಕ್ರಮಗಳ ಮೂಲಕ ಈ ಕೆಲಸಗಳನ್ನು ಮಾಡುತ್ತಾ ಬಂದಿದೆ. ಕರ್ನಾಟಕದ ವಿವಿಧ ಕ್ಷೇತ್ರಗಳ ಕುರಿತು ಈಗ ಜನರು ಹೆಚ್ಚು ಹೆಚ್ಚು ತಿಳಿದುಕೊಳ್ಳುತ್ತಿದ್ದಾರೆ. ಇದರಿಂದ ಕರ್ನಾಟಕದ ಅಭಿವೃದ್ಧಿಗೆ ಹೆಚ್ಚು ಬಂಡವಾಳ ಹೂಡಿಕೆಯಾಗುವುದರೊಂದಿಗೆ, ಸಂಸ್ಕೃತಿ, ಭಾಷೆ ಮತ್ತು ಪರಂಪರೆಯ ಕುರಿತು ನಾಡಿನಿಂದ ಹೊರಗಿನವರಲ್ಲಿಯೂ ಆಸಕ್ತಿ ಮೂಡುತ್ತದೆ. ಈಗ ದೆಹಲಿ ಸರಕಾರವು ದೇಶದ ವಿವಿಧ ಭಾಷೆಗಳ ಅಕಾಡೆಮಿ ಸ್ಥಾಪಿಸುವ ನಿರ್ಧಾರವನ್ನು ಕೈಗೊಂಡಿರುವುದು ದೆಹಲಿಯಲ್ಲಿ ಚಿಗುರೊಡೆಯುತ್ತಿರುವ ಕರ್ನಾಟಕದ ಧ್ವನಿಗೆ ಹೆಚ್ಚಿನ ಶಕ್ತಿ ಸಿಗುವ ಸೂಚನೆಯಾಗಿದೆ. ಈ ನಿಟ್ಟಿನಲ್ಲಿ ದೆಹಲಿ ಕರ್ನಾಟಕ ಸಂಘವು ದೆಹಲಿ ಹಾಗೂ ಕರ್ನಾಟಕ ಸರ್ಕಾರಗಳ ನಡುವೆ ಸಂಪರ್ಕಕೊಂಡಿಯಾಗಿರುವುದಲ್ಲದೇ ಭಾಷೆ ಮತ್ತು ಸಂಸ್ಕೃತಿಯ ಇಂತಹ ಕೆಲಸಗಳ ಅನುಷ್ಠಾನಕ್ಕೆ ಸದಾ ಸಿದ್ಧವಿರುತ್ತದೆ. ಕರ್ನಾಟಕ ಸರಕಾರದಿಂದ ಈಗಾಗಲೇ ಪೂರಕವಾದ ಸ್ಪಂದನೆ ದೊರೆತಿರುವುದು ನಮಗೆ ಸಂತಸದ ವಿಚಾರವಾಗಿದೆ. ಇದು ಕರ್ನಾಟಕ ಮತ್ತು ದೆಹಲಿಯಲ್ಲಿ ಯಾವುದೇ ಪಕ್ಷಗಳ ಸರಕಾರ ಬಂದರೂ ಪಕ್ಷಾತೀತವಾಗಿ ನಡೆಯಬೇಕಾದ ಕೆಲಸವಾಗಿದೆ. ಸಾಂಸ್ಕೃತಿಕವಾಗಿ ಮತ್ತು ಸಾಹಿತ್ಯಿಕವಾಗಿ ನಡೆಯುವ ರಾಜಕೀಯರಹಿತ ವೇದಿಕೆಗೆ ನಮ್ಮ ಬೆಂಬಲ ಬೇಕಾಗಿದೆ.

ದೆಹಲಿಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡುತ್ತಿರುವ ಅನೇಕ ಕನ್ನಡಿಗರು ನೆಲೆಸಿದ್ದಾರೆ. ಅಂತಹವರನ್ನು ನಾಡು, ನುಡಿಯನ್ನು ಕಟ್ಟಿ ಬೆಳೆಸುವ ಕೆಲಸಕ್ಕೆ ಸರ್ಕಾರಗಳು ಉಪಯೋಗಿಸಬೇಕು. ಉದಾಹರಣೆಗೆ ಸಾಹಿತ್ಯ ಮತ್ತು ರಂಗಭೂಮಿಯ ಕ್ಷೇತ್ರದಲ್ಲಿ ಪ್ರೊ. ಎಚ್.ಎಸ್. ಶಿವಪ್ರಕಾಶ್, ಜಾನಪದ, ಶಿಕ್ಷಣ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಡಾ. ಪುರುಷೋತ್ತಮ ಬಿಳಿಮಲೆ, ಅಂತರಾಷ್ಟ್ರೀಯ ಕಾನೂನು ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಡಾ. ವೆಂಕಟಾಚಲ ಹೆಗಡೆಯವರಂತ ಧೀಮಂತರನ್ನು ಅವರವರ ಕ್ಷೇತ್ರಗಳಲ್ಲಿ ದುಡಿಸಿಕೊಳ್ಳುವ ಕೆಲಸವನ್ನು ಸರಕಾರಗಳು ನಡೆಸಬೇಕಾಗಿದೆ.

ಇತ್ತೀಚೆಗಿನ ಕೆಲವು ದಶಕಗಳಿಂದ ಅಭಿಮತದ ಪ್ರಕಟಣೆ ನಿರಂತರವಾಗಿ ನಡೆಯುತ್ತಿದೆ. ಇದಕ್ಕೆ ಮುಖ್ಯವಾಗಿ ಮುದ್ರಣಕ್ಷೇತ್ರದಲ್ಲಿ ಆಗಿರುವ ತಾಂತ್ರಿಕ ಬೆಳವಣಿಗೆಯ ಜತೆಗೆ ದೆಹಲಿ ಕರ್ನಾಟಕ ಸಂಘದಲ್ಲಿ ನಿರಂತರವಾಗಿ ನಡೆಯುತ್ತಿರುವ ಅನೇಕ ಕಾರ್ಯಕ್ರಮಗಳು ಮತ್ತು ಅಭಿಮತ ಸಂಪಾದಕ ಮಂಡಳಿಯ ಸಹಕಾರ ಕಾರಣವಾಗಿದೆ. ಅಭಿಮತದ ಮುದ್ರಣ ಪ್ರತಿಗಳು ಕೆಲವೊಮ್ಮೆ ಅಂಚೆಯ ಮೂಲಕ ತಲುಪುವಲ್ಲಿ ತೊಂದರೆಯಾದರೂ ಸಂಘದ ವೆಬ್‌ಸೈಟ್ ಮತ್ತು ಈಮೇಲ್ ಮೂಲಕ ಓದುಗರನ್ನು ತಲುಪುವಲ್ಲಿ ನಮ್ಮ ಪ್ರಯತ್ನ ಮುಂದುವರಿದಿದೆ. ಈ ಸಂಚಿಕೆಯು ಅಭಿಮತದ 29ನೇ ವರ್ಷದ ಮೊದಲ ಸಂಚಿಕೆಯಾಗಿದೆ. ಅಭಿಮತವನ್ನು ಈ ಮಟ್ಟಕ್ಕೆ ತರುವಲ್ಲಿ ಶ್ರಮಿಸಿದ ಈ ಹಿಂದಿನ ಎಲ್ಲಾ ಸಂಪಾದಕ ಮಂಡಳಿಗಳ ಕೊಡುಗೆ ಮಹತ್ತರವಾಗಿದೆ. ಮುಂದೆಯೂ ಇದು ನಿರಂತರವಾಗಿ ಮುಂದುವರಿಯುತ್ತಿರಬೇಕು ಎಂದು ಹಾರೈಸುವೆನು.

ಸಂಘದ ಎಲ್ಲಾ ಸದಸ್ಯರಿಗೆ ಮತ್ತು ಅಭಿಮತದ ಓದುಗರಿಗೆ ನಾಡಹಬ್ಬ ದಸರಾ ಮತ್ತು ನವರಾತ್ರಿಯ ಹಾರ್ದಿಕ ಶುಭಾಶಯಗಳು. ಅ

***ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು***

## ವಿದ್ಯಾರ್ಥಿ ವೇತನ 2018–19

ದೆಹಲಿ ಕರ್ನಾಟಕ ಸಂಘದಿಂದ 2018–19ನೇ ಸಾಲಿಗಾಗಿ ನೀಡುವ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿಗಳನ್ನು ಕರೆಯಲಾಗಿದೆ.

ಸಂಘದ ಸದಸ್ಯರು ಅರ್ಜಿಯನ್ನು ಸಂಘದ ಕಾರ್ಯಾಲಯದಿಂದ ಪಡೆಯಬಹುದು. ಭರ್ತಿ ಮಾಡಿದ ಅರ್ಜಿಯನ್ನು **22 ಅಕ್ಟೋಬರ್** 2018ರೊಳಗಾಗಿ ಸಂಘದ ಕಾರ್ಯಾಲಯಕ್ಕೆ ತಲುಪಿಸಬೇಕು.

**ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.**

*ಪ್ರಧಾನ ಕಾರ್ಯದರ್ಶಿ*

## ವೈದ್ಯಕೀಯ ಸಲಹೆಗಳು

**ಡಾ. ನಿರಂಜನ್ ನಾಯ್ಕ್, MBBS, MS (AIIMS), ONCO-SURGERY (IRCH, AIIMS)** ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 21 ಅಕ್ಟೋಬರ್, 2018ರಂದು ಬೆಳಿಗ್ಗೆ 10 ಗಂಟೆಯಿಂದ.

**ಡಾ. ಸಾಯಿಪ್ರಶಾಂತಿ ಶೆಟ್ಟಿ B.A.M.S., Msc, Yoga Therapy** ಅವರಿಂದ ಆಯುರ್ವೇದ ಮತ್ತು ಯೋಗ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 21 ಅಕ್ಟೋಬರ್, 2018ರಂದು ಸಾಯಂಕಾಲ 4 ಗಂಟೆಯಿಂದ.

**ಡಾ. ಗುರುರಾಜ ಸಂಗೊಂದಿಮಠ MS, FNB, Spine Surgeon,** ಅವರಿಂದ ಬೆನ್ನು ಮೂಳೆಗೆ ಸಂಬಂಧಿತ ರೋಗಗಳಿಗೆ ಉಚಿತ ವೈದ್ಯಕೀಯ ಸಲಹೆ ಭಾನುವಾರ 28 ಅಕ್ಟೋಬರ್, 2018ರಂದು ಬೆಳಿಗ್ಗೆ 11 ಗಂಟೆಯಿಂದ

**ಡಾ. ಭೀಮ್ ಭಟ್ M.D. (AYU)** ಅವರಿಂದ ಉಚಿತ ಆಯುರ್ವೇದ ವೈದ್ಯಕೀಯ ಸಲಹೆ ಭಾನುವಾರ 28 ಅಕ್ಟೋಬರ್, 2018ರಂದು ಸಾಯಂಕಾಲ 4 ಗಂಟೆಯಿಂದ.


### ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ

**ಅಧ್ಯಕ್ಷ**
ವಸಂತ ಶೆಟ್ಟಿ ಬೆಳ್ಳಾರೆ: 9958697823

**ಉಪಾಧ್ಯಕ್ಷರು**
ಆಶಾಲತಾ ಎಂ.: 9891249149
ಎಸ್.ಸಿ. ಹೇಮಲತ: 9971121636

**ಪ್ರಧಾನ ಕಾರ್ಯದರ್ಶಿ**
ಸಿ.ಎಂ.ನಾಗರಾಜ: 9811325440

**ಕೋಶಾಧಿಕಾರಿ**
ಕೆ.ಎಸ್.ಜಿ. ಶೆಟ್ಟಿ 9810232113

**ಜಂಟಿ ಕಾರ್ಯದರ್ಶಿಗಳು**
ಟಿ.ಪಿ. ಬೆಳ್ಳಿಯಪ್ಪ: 9654555795
ಜಮುನಾ ಸಿ. ಮಠದ: 9717146597

**ಸಮಿತಿ ಸದಸ್ಯರು**
ಡಾ. ಎಂ.ಎಸ್. ಶಶಿಕುಮಾರ್: 9811689337
ರಾಧಾಕೃಷ್ಣ: 9818252183
ಪೂಜಾ ಪಿ. ರಾವ್: 9810882498
ವಿ.ವಿ.ಬಿರಾದಾರ: 9873005409
ಸಖಾರಾಮ ಉಪ್ಪೂರು 8447288475
ಸುಮಿತಾ ಮುರಗೋಡ 9873000333
ಶಶಿಕಾಂತ್ ಪಾಟೀಲ್ 9650182413
ಬಾಬುರಾಜ್ ಪೂಜಾರಿ 9818807696
ತ್ಯಾಗೇಶ್ ಮೂರ್ತಿ 9868393961
ಸಂತೋಷ್ ಜೆ. 9911235783

**ವಿಶೇಷ ಆಹ್ವಾನಿತರು**
ಡಾ. ಶರತ್ ಎಸ್. ಜವಳಿ
ಡಾ. ಪುರುಷೋತ್ತಮ ಬಿಳಿಮಲೆ
ಎನ್.ಎಂ. ಸರೋಜ
ರಾಧಾ ಕೌಜಲಗಿ
ಎಂ. ಶಿವರಾಮ ರೈ
ಪಿ. ರಾಜಣ್ಣ

**ಕಾವಲು ಸಮಿತಿ**
ಪಿ.ಎಸ್. ಶೆಟ್ಟಿ
ನಂದಿನಿ ಮಲ್ಯ
ಈಶ್ವರ ಮಡಿವಾಳ





**DELHI KARNATAKA *SANGHA*** Rao Tularam Marg, Sector-12, R K Puram, New Delhi-110022.
Phone: 011-26109615. 011-26104818 email:dksangha@gmail.com

## ಮುನ್ನೋಟ

ಆತ್ಮೀಯರೇ,

ಈ ಬಾರಿ ಕನ್ನಡ ರಾಜ್ಯೋತ್ಸವ ಸಂದರ್ಭದಲ್ಲಿ ಮತ್ತೊಂದು ವಿಶೇಷ ಸುದ್ದಿಯನ್ನು ತಮ್ಮಲ್ಲಿ ಹಂಚಿಕೊಳ್ಳುತ್ತಿದ್ದೇನೆ. ದೆಹಲಿ ಸರ್ಕಾರವು ಕನ್ನಡ ಅಕಾಡೆಮಿಯನ್ನು ಮಾಡಲು ಮುಂದಾಗಿದೆ. ಅದು ರಾಜ್ಯೋತ್ಸವ ಸಂದರ್ಭದಲ್ಲಿ ಮಾಡುವುದಾಗಿ ಮಾನ್ಯ ಉಪಮುಖ್ಯಮಂತ್ರಿಗಳಾದ ಶ್ರೀ ಮನೀಷ್ ಸಿಸೋಡಿಯಾ ಅವರು ದೆಹಲಿ ಕರ್ನಾಟಕ ಸಂಘದಲ್ಲಿ ನಡೆದ ಪಟ್ಲ ವಿಶ್ವ ಯಕ್ಷ ಸಂಭ್ರಮ ಕಾರ್ಯಕ್ರಮದಲ್ಲಿ ಭರವಸೆಯನ್ನು ನೀಡಿದ್ದಾರೆ.

ಕನ್ನಡ ರಾಜ್ಯೋತ್ಸವದ ಅಂಗವಾಗಿ ಕರ್ನಾಟಕದ ಕಲೆ, ಸಂಸ್ಕೃತಿ, ಜಾನಪದವನ್ನೊಳಗೊಂಡ ಒಂದು ಕಾರ್ಯಕ್ರಮವನ್ನು ದೆಹಲಿ ಸರ್ಕಾರ, ದೆಹಲಿ ಕರ್ನಾಟಕ ಸಂಘ ಮತ್ತು ಕರ್ನಾಟಕ ಸರ್ಕಾರದ ಸಹಯೋಗದೊಂದಿಗೆ ದೆಹಲಿಯ ಮಧ್ಯಭಾಗದಲ್ಲಿರುವ ರಾಜೀವ್ ಚೌಕ್‌ನಲ್ಲಿ ಆಯೋಜಿಸುವ ಪ್ರಯತ್ನದಲ್ಲಿದ್ದೇವೆ.

ನವೆಂಬರ್ 1ರಂದು ಕನ್ನಡ ರಾಜ್ಯೋತ್ಸವವನ್ನು ಕರ್ನಾಟಕ ಭವನದ ಸಹಯೋಗದೊಂದಿಗೆ ಶ್ರೀ ನಿಲಯ ಮಿತಾಶ್ ನಿವಾಸಿ ಆಯುಕ್ತರಾದ ಅವರ ಸಾರಥ್ಯದಲ್ಲಿ ವಿಶೇಷ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು. ಬನ್ನಿ ಪಾಲ್ಗೊಳ್ಳಿ, ಜೊತೆಗೆ ಸಂಘದಲ್ಲಿ ಪ್ರತೀ ಭಾನುವಾರ ರಾಜ್ಯೋತ್ಸವದ ಅಂಗವಾಗಿ ಕಾರ್ಯಕ್ರಮಗಳು ನಡೆಯಿತು. ತಾಲ್ಕತೋರಾ ಮೈದಾನದಲ್ಲಿ ಅಕ್ಟೋಬರ್ 13 ಮತ್ತು 14ರಂದು ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿ ಮತ್ತು ಅಕ್ಟೋಬರ್ 27 ಮತ್ತು 28 ವಾರ್ಷಿಕ ಆಟೋಟ ಸ್ಪರ್ಧೆಗಳನ್ನು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಆಯೋಜಿಸಲಾಗುವುದು. ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ.

ಜೊತೆಗೆ ಅರ್ಹತೆ ಮತ್ತು ಅವಶ್ಯಕತೆ ಆಧಾರದ ಮೇಲೆ ವಿದ್ಯಾರ್ಥಿ ವೇತನವನ್ನು ದೆಹಲಿ ಕರ್ನಾಟಕ ಸಂಘವು ನೀಡುತ್ತಿದೆ. ಇದರ ಉಪಯೋಗವನ್ನು ಪಡೆಯಿರಿ. ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು ಅಕ್ಟೋಬರ್ 22 ಕೊನೆಯ ದಿನಾಂಕವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಸಂಘದ ಕಚೇರಿಯನ್ನು ಸಂಪರ್ಕಿಸಿ.

ನವೆಂಬರ್ ತಿಂಗಳಿನಲ್ಲಿ ಪ್ರಸಿದ್ಧವಾದ ಆಹಾರ ಮೇಳವನ್ನೂ ಸಹ ಆಯೋಜಿಸಲಿದ್ದೇವೆ. ಅ

*ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ*

## ದೆಹಲಿ ಕರ್ನಾಟಕ ಸಂಘದಲ್ಲಿ ತಿಂಗಳ ಕಾರ್ಯಕ್ರಮ

**2018 ಅಕ್ಟೋಬರ್ 27**
ಶನಿವಾರ
ಸಂಜೆ : 5.00ಗಂಟೆಗೆ

ಹೆಗ್ಗೋಡು ಕೆ.ವಿ. ಸುಬ್ಬಣ್ಣ ರಂಗಸಮೂಹ, ಕಲಾವಿದರು ಪ್ರಸ್ತುತಪಡಿಸುವ–ಮಂಜುನಾಥ ಎಲ್. ಬಡಿಗೇರ್ ನಿರ್ದೇಶನದ ನಾಟಕ : ಸಂದೇಹ ಸಾಮ್ರಾಜ್ಯ

**2018 ನವೆಂಬರ್ 03**
ಶನಿವಾರ
ಸಂಜೆ : 5.00ಗಂಟೆಗೆ

ಬಿ.ವಿ. ಕಾರಂತ–89 ರಂಗೋತ್ಸವ
ಬಿ.ವಿ. ಕಾರಂತರ ಜೀವನ ಚರಿತ್ರೆ ಮತ್ತು ಸಾಧನೆ ಕುರಿತ ಶ್ರೀ ಟಿ.ಎಸ್. ನಾಗಾಭರಣ ಸಂಗೀತ ನಿರ್ದೇಶನದ, ಬಾಪಾ ಕಲಾವಿದರು ಪ್ರಸ್ತುತಪಡಿಸುವ ನಾಟಕ : ಬಾಬಾ ಕಾರಂತ

**2018 ನವೆಂಬರ್ 04**
ಭಾನುವಾರ
ಸಂಜೆ : 5.00ಗಂಟೆಗೆ

ಬಿ.ವಿ. ಕಾರಂತ–89 ರಂಗೋತ್ಸವ
ಬಿ.ವಿ. ಕಾರಂತ ಸಂಗೀತ ನಿರ್ದೇಶನದ ಬೆನಕ ಕಲಾವಿದರು ಪ್ರಸ್ತುತಪಡಿಸುವ ನಾಟಕ : ಸತ್ತವರ ನೆರಳು

## ಸಂಘದ ಆರ್ಟ್ ಗ್ಯಾಲರಿಯಲ್ಲಿ

ಅಕ್ಟೋಬರ್ 13 ರಿಂದ 21, 2018ರವರೆಗೆ
ಶ್ರೀಮತಿ ಸುಮಿತ್ರಾ, ಬೆಂಗಳೂರು ಇವರಿಂದ ಚಿತ್ರಕಲಾ ಪ್ರದರ್ಶನ.



ಅಭಿಮತ ಪ್ರಧಾನ ಸಂಪಾದಕರು
ಬಾಲಕೃಷ್ಣ ನಾಯ್ಕ್ ಡಿ.
ಅಭಿಮತ ಸಂಪಾದಕ ಮಂಡಳಿ
ಸಖಾರಾಮ ಉಪ್ಪೂರು, ಚಂದ್ರಶೇಖರ್ ಎನ್.ಪಿ., ಎಸ್. ಕುಮಾರ್
ಸಂಪುಟ 29 ಸಂಚಿಕೆ 1
ಅಕ್ಟೋಬರ್ 2018
ಅಭಿಮತ
ದೇನಾ ಕರ್ನಾಟಕ ಸಂಘದ ಅಭಿಮತ

## ಸಂಪಾದಕರ ಟಿಪ್ಪಣಿಗಳು

# ಮಹಾತ್ಮಗಾಂಧಿ 150

ಮಾನವ ನಾಗರೀಕತೆಯು ಬೆಳೆದಂತೆಲ್ಲಾ ಇತಿಹಾಸವು ಆಯಾ ದೇಶ ಮತ್ತು ಕಾಲಘಟ್ಟದ ಅವಶ್ಯಕತೆಗೆ ಬೇಕಾದಂತೆ ಪರಿಸ್ಥಿತಿಯ ಪ್ರತಿಕ್ರಿಯೆಯಾಗಿ ಮಹಾನ್ ವ್ಯಕ್ತಿಗಳನ್ನು ರೂಪಿಸಿದೆ. ಗ್ರೀಕ್ ಸಂಸ್ಕೃತಿಯು ಪ್ಲಾಟೋ, ಆರ್ಕಿಮಿಡಿಸ್, ಸಾಕ್ರೆಟಿಸ್, ಪೈಥಗೊರಸ್, ಹಿಪೋಕ್ರೇಟ್ ಮುಂತಾದವರನ್ನು ಕೊಟ್ಟರೆ ಆಧುನಿಕ ಇತಿಹಾಸವು ನೆಪೋಲಿಯನ್ ಬೋನಪಾರ್ಟ್, ಅಬ್ರಹಾಂ ಲಿಂಕನ್, ಲಿಯೋ ಟಾಲ್‌ಸ್ಟಾಯ್, ಕಾರ್ಲ್ ಮಾರ್ಕ್ಸ್, ಆಲ್ಬರ್ಟ್ ಐನ್‌ಸ್ಟೀನ್, ನೆಲ್ಸನ್ ಮಂಡೇಲಾರಂತಹ ಮಹಾಪುರುಷರನ್ನು ನೀಡಿದೆ. ಭಾರತವು ಮಹಾಪುರುಷರ ದೊಡ್ಡ ಪರಂಪರೆಯನ್ನೇ ಹೊಂದಿದ ದೇಶ. ಗೌತಮ ಬುದ್ಧ, ಅಶೋಕ ಸಾಮ್ರಾಟ್, ಶಂಕರಾಚಾರ್ಯ, ವಿವೇಕಾನಂದ, ರವೀಂದ್ರನಾಥ್ ಠಾಗೋರ್, ಬಿ.ಆರ್. ಅಂಬೇಡ್ಕರ್ ಮೊದಲಾದವರು ತಮ್ಮ ಕಾಲದ ಬೌದ್ಧಿಕ ಚಿಂತನೆಗಳಿಗೆ ಹೊಸ ಆಯಾಮಗಳನ್ನು ನೀಡಿದವರು.


ಆದರೆ ಭಾರತವು ವಿಶ್ವಮಟ್ಟದ ಮಹಾನ್ ಪುರುಷನನ್ನು ಜಗತ್ತಿಗೆ ನೀಡಿದ್ದರೆ ಅದು ಮಹಾತ್ಮಗಾಂಧಿ ಅಲ್ಲದೇ ಇನ್ನಾರೂ ಆಗಲಾರರು. ಕಥಿಯಾವಾಡ ಪ್ರದೇಶದ ಪೋರ್‌ಬಂದರ್‌ನಲ್ಲಿ 1868ರ ಅಕ್ಟೋಬರ್ ಎರಡರಂದು ಜನಿಸಿದ ಮೋಹನದಾಸ್ ಕರಮಚಂದ್ ಗಾಂಧಿಯವರು ತಮ್ಮ ಹದಿಮೂರನೇ ವಯಸ್ಸಿನಲ್ಲಿಯೇ ಕಸ್ತೂರ್‌ಬಾಯಿ ಮಖಾಂಜಿ ಕಪಾಡಿಯಾ ಅವರನ್ನು ವಿವಾಹವಾದರು. ತಮ್ಮ ಹದಿನೆಂಟನೆಯ ವಯಸ್ಸಿನಲ್ಲಿ ಲಂಡನ್‌ಗೆ ತೆರಳಿ ಅಲ್ಲಿ ಕಾನೂನು ಅಭ್ಯಸಿಸಿದ ಗಾಂಧೀಜಿಯವರು ಮತ್ತೆ ಭಾರತಕ್ಕೆ ಬಂದು ತಮ್ಮ ವೃತ್ತಿ ಜೀವನವನ್ನು ಆರಂಭಿಸಲಾಗದೇ ಗುಜರಾತಿ ವ್ಯಾಪಾರಿಯೊಬ್ಬರ ಕೋರ್ಟ್ ಕೇಸಿಗಾಗಿ ದಕ್ಷಿಣ ಆಫ್ರಿಕಾಕ್ಕೆ ತೆರಳಿದರು. ಅಲ್ಲಿ ಅವರು ಎರಡು ದಶಕಗಳ ಕಾಲ ವಕೀಲಿ ವೃತ್ತಿಯನ್ನು ಮಾಡುತ್ತಾ ಬದುಕನ್ನು ನಡೆಸಿದರು. ಜತೆಗೆ ಇಂಡಿಯನ್ ಒಪಿನಿಯನ್ ಎಂಬ ಪತ್ರಿಕೆಯನ್ನು ನಡೆಸುತ್ತಿದ್ದರಲ್ಲದೇ ಸಾಮಾಜಿಕ ಹೋರಾಟಗಾರರಾಗಿಯೂ ಇದ್ದರು.

ದಕ್ಷಿಣ ಆಫ್ರೀಕಾದಲ್ಲಿರುವಾಗಲೇ ಗಾಂಧೀಜಿಯವರು ಭಾರತದಲ್ಲಿ ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಸ್ಥಾಪಕರಾದ ಗೋಪಾಲ್ ಕೃಷ್ಣ ಗೋಖಲೆಯವರ ಸಂಪರ್ಕದಲ್ಲಿದ್ದರು. ಗೋಖಲೆಯವರನ್ನೇ ಗಾಂಧೀಜಿಯವರು ತಮ್ಮ ರಾಜಕೀಯ ಗುರು ಎಂದು ಕೊಂಡರು. ರವೀಂದ್ರನಾಥ ಠಾಗೋರರು ಅವರನ್ನು ಮಹಾತ್ಮ ಎಂದು ಕರೆದರು. ಭಾರತದ ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರಕ್ಕೆ ಕಾಲಿರಿಸಿದುದು ಅವರಿಗೆ ಸುಮಾರು 47 ವರ್ಷ ಆದ ಮೇಲೆ. ನಂತರದ ಅವರ ಬದುಕು ಬ್ರಿಟಿಷರನ್ನು ತೊಲಗಿಸಿ ಭಾರತದ ಸ್ವಾತಂತ್ರ್ಯಕ್ಕೆ ಮುಡುಪಾಯಿತು. ಗಾಂಧೀಜಿಯವರ ನೂರ ಐವತ್ತನೇ ಜನ್ಮದಿನಾಚರಣೆಯ ಸಂದರ್ಭದಲ್ಲಿ ಗಾಂಧೀಜಿಯವರ ಚಿಂತನೆಗಳ ಕುರಿತು ಚರ್ಚೆಗಳು ಮುಂದುವರಿದಿವೆ.

ಹಿಂಸೆಗೆ ಪ್ರತಿಕಾರವಾಗಿ ಹಿಂಸೆಯನ್ನು ಉಪಯೋಗಿಸಿದರೆ ಇಡೀ ಪ್ರಪಂಚವೇ ಅಂಧಕಾರದಲ್ಲಿ ಮುಳುಗುವುದು ಎಂಬ ಧೋರಣೆಯನ್ನು ಹೊಂದಿದ ಗಾಂಧೀಜಿಯವರು ಸತ್ಯ ಮತ್ತು ಅಹಿಂಸೆಯನ್ನು ಪ್ರತಿಪಾದಿಸುತ್ತಾ ಅದೇ ದಾರಿಯಲ್ಲಿ ತಮ್ಮ ಜೀವನವನ್ನು ನಡೆಸಿದರು. ಅಹಿಂಸೆ ಮತ್ತು ಸತ್ಯಾಗ್ರಹಗಳೇ ಭಾರತದ ಸ್ವಾತಂತ್ರ್ಯ ಸಂಗ್ರಾಮದ ಹಾದಿಯಾಗಿತ್ತು. ಭಾರತದ ಅಂದಿನ ಸಮಾಜದಲ್ಲಿದ್ದ ಜಾತಿಪದ್ಧತಿ, ಅಸ್ಪೃಶ್ಯತೆ, ಮೂಢನಂಬಿಕೆ, ಬಾಲ್ಯವಿವಾಹ, ವಿಧವೆಯರ ದುಸ್ಥಿತಿ, ಸ್ತ್ರೀಸ್ವಾತಂತ್ರ್ಯ ಇವೆಲ್ಲದರಲ್ಲೂ ಸುಧಾರಣೆ ತರಲು ಗಾಂಧೀಜಿಯವರು ಜನರನ್ನು ಹುರಿದುಂಬಿಸಿದರು. ಮಹಾತ್ಮ ಗಾಂಧಿಯವರ ಬಾಲ್ಯದಿಂದ 1920ರ ತನಕದ ವಿಚಾರಗಳನ್ನು ತಿಳಿಸುವ ಅವರ ಆತ್ಮ ಚರಿತ್ರೆ ಸತ್ಯದೊಂದಿಗೆ ನನ್ನ ಪ್ರಯೋಗಗಳು ಪುಸ್ತಕ ಬಹು ಜನಪ್ರಿಯ ಹಾಗೂ ಪ್ರಭಾವಕಾರಿಯಾಗಿದೆ.

ನೈರ್ಮಲೀಕರಣದ ಕುರಿತು ಅತೀವ ಆಸಕ್ತಿಯಿದ್ದ ಗಾಂಧೀಜಿಯವರು ಅಂದಿನ ಕಾಲದ ಮೂರನೇ ದರ್ಜೆಯ ರೈಲು ಭೋಗಿಗಳಲ್ಲಿ ಇರುತ್ತಿದ್ದ ಗಲೀಜಿನ ಕುರಿತು ಕಂಗೆಟ್ಟಿದ್ದರು. ಭಾರತದ ಧಾರ್ಮಿಕ ಕ್ಷೇತ್ರಗಳಾದ ವಾರಾಣಾಸಿ ಮತ್ತು ಹರಿದ್ವಾರಗಳಂತಹ ಸ್ಥಳಗಳಲ್ಲಿ ಜನರು ಪೂಜಾಸ್ಥಳಗಳ ರಸ್ತೆಗಳಲ್ಲಿ ಮತ್ತು ಪವಿತ್ರವಾದ ಗಂಗೆಯಲ್ಲಿ ಮಾಡುತ್ತಿದ್ದ ಗಲೀಜಿನ ಬಗ್ಗೆ ಸಿಟ್ಟಾಗುತ್ತಿದ್ದರು. ಗಾಂಧೀಜಿಯವರ ನೂರ ಐವತ್ತನೆಯ ಜಯಂತಿಗೆ ಅವರಿಗೆ ನಾವು ಸಲ್ಲಿಸಬಹುದಾದ ಗೌರವವು ನಮ್ಮ ದೇಶವನ್ನು ಸ್ವಚ್ಛವಾಗಿಡುವುದು ಎಂಬ ಆಶಯದಲ್ಲಿ ಕೇಂದ್ರ ಸರಕಾರವು 2014ರ ಅಕ್ಟೋಬರ್ ಎರಡರಂದು ಸ್ವಚ್ಛ ಭಾರತ ಅಭಿಯಾನಕ್ಕೆ ನವದೆಹಲಿಯ ರಾಜಪಥದಲ್ಲಿ ಚಾಲನೆ ನೀಡಿದೆ. ಅದನ್ನು ಸಾಕಾರಗೊಳಿಸುವುದು ನಿಜವಾಗಿಯೂ ನಾವು ಗಾಂಧೀಜಿಯವರನ್ನು ಗೌರವಿಸಿದಂತೆ ಆಗುತ್ತದೆ. ಅ

ಬಾಲಕೃಷ್ಣ ನಾಯ್ಕ್ ಡಿ.




# ನಿರಂಜನ ಕೃತಿ ಲೋಕಾರ್ಪಣೆ

'ಪುಸ್ತಕ ಪ್ರಕಟಣೆ' ದೆಹಲಿ ಕರ್ನಾಟಕ ಸಂಘದ ಇನ್ನುಳಿದ ಎಲ್ಲಾ ಕಾರ್ಯಕ್ರಮಗಳಿಗಿಂತ ಭಿನ್ನವಾದುದು. ಸಂಘದ ಇನ್ನುಳಿದ ಕಾರ್ಯಕ್ರಮಗಳು ಕೆಲಕಾಲ ನೆನಪಿನಂಗಳದಲ್ಲಿದ್ದು ಕ್ರಮೇಣ ಮರೆಯಾಗುವಂತವುಗಳು. ಆದರೆ ಈ ರೀತಿ ಪ್ರಕಟಿಸಿ ಲೋಕಾರ್ಪಣೆಗೊಳಿಸಿದ ಪುಸ್ತಕಗಳು ದೀರ್ಘಕಾಲ ಉಳಿದು ಮುಂಬರುವ ಪೀಳಿಗೆಗೆ ದಾರಿದೀಪವಾಗಬಹುದು. ಆದಕಾರಣ ಮುಂಬರುವ ಕಾರ್ಯಕಾರಿ ಸಮಿತಿಗಳು ಈ ಪುಸ್ತಕ ಪ್ರಕಟಣೆಯನ್ನು ಇನ್ನೂ ಪ್ರಚುರಗೊಳಿಸಿ ಸದಾಕಾಲ ಮುಂದುವರೆಸಲಿ

*ಚೆನ್ನು ಎಸ್.ಮಠದ*



ದೆಹಲಿ ಕರ್ನಾಟಕ ಸಂಘವು ಪ್ರಕಟಿಸಿ ಬೆಂಗಳೂರಿನಲಿ ಬಿಡುಗಡೆಗೊಂಡ ಖ್ಯಾತ ಸಾಹಿತಿ ನಿರಂಜನ ಅವರ ಕುರಿತಾದ ಪುಸ್ತಕ ಕೃತಿ ಸ್ಮೃತಿ–ನಿರಂಜನ ನೀಲಾಂಜನವನ್ನು ದೆಹಲಿ ಕರ್ನಾಟಕ ಸಂಘದಲ್ಲಿ ಇದೇ ಸೆಪ್ಟೆಂಬರ್ 9ರಂದು ದೆಹಲಿ ಕನ್ನಡಿಗರಿಗೆ ಲೋಕಾರ್ಪಣೆ ಮಾಡಲಾಯಿತು.

ದೆಹಲಿ ಹಿರಿಯ ಚಿತ್ರಕಲಾವಿದ ಶ್ರೀ ಚೆನ್ನು ಎಸ್. ಮಠದ ಅವರು ಕೃತಿಯನ್ನು ಲೋಕಾರ್ಪಣೆಗೊಳಿಸಿದರು. ಹಿರಿಯ ಸಕ್ರಿಯ ಸದಸ್ಯೆ ಡಾ. ಅಹಲ್ಯಾ ಚಿಂತಾಮಣಿ ಅವರು ಮುಖ್ಯ ಅತಿಥಿಯಾಗಿದ್ದರು.

ಶ್ರೀ ಚೆನ್ನು ಮಠದ ಅವರು ಮಾನಾಡುತ್ತ ನನಗೆ ತಿಳಿದಂತೆ ದೆಹಲಿ ಕರ್ನಾಟಕ ಸಂಘವು 'ಅಭಿಮತ' ಪತ್ರಿಕೆ ಹೊರತುಪಡಿಸಿ ಪ್ರಕಟಣಾ ಕಾರ್ಯಕ್ರಮ ಪ್ರಾರಂಭಿಸಿದ್ದು 1993–94ರಲ್ಲಿ. ಹೆಸರಾಂತ ಲೇಖಕರುಗಳಾದ ಶ್ರೀ ಮೊಹಮ್ಮದ್ ಬೋಳುವಾರು ಕುಂಞ, ಪೊಳಲಿ ಬಾಲಕೃಷ್ಣ ಶೆಟ್ಟಿ, ಹೆಬ್ರಿ ಚಂದ್ರಕಾಂತ ಮಲ್ಯರಂತವರು ದೆಹಲಿಯಲ್ಲಿ ವಾಸವಾಗಿದ್ದ ಸಮಯದಲ್ಲಿ ಸಂಘದ ಮೊದಲ ಪುಸ್ತಕ 'ದೆಹಲಿ ಕನ್ನಡ ಸಾಹಿತ್ಯ ಸಂಪುಟ–1'ನ್ನು ಹೊರತಂದಿದ್ದೆವು ಎಂದರು. ತದನಂತರ ಹಲವು ಕಾಲ ಸ್ಥಗಿತಗೊಂಡಿದ್ದ ಪ್ರಕಟಣಾ ಕಾರ್ಯಕ್ರಮ ಇತ್ತೀಚೆಗೆ ತೀವ್ರಗತಿ ಪಡೆದಿರುವುದು ನನಗೆ ನಿಜಕ್ಕೂ ಸಂತಸ ತಂದಿದೆ. 'ಏ–ಜರ್ನೀ ಟು ವಾರ್ಧಾ' (ಇಂಗ್ಲಿಷ್), ಕಿತ್ತೂರಿನ ಕೆಚ್ಚೆದೆಯ ರಾಣಿ ಚೆನ್ನಮ್ಮ (ನಾಟಕ), ದೇವರು ಎದ್ದು ಬಂದಾಗ (ನಾಟಕ) ಹಾಗೂ ಕವನ ಸಂಕಲನಗಳಾದ ನಾನು–ನೀನು, ರಂಗಿನೋಕುಳಿ, ನಮ್ಮಿಬ್ಬರ ನಡುವೆ, ಅಕವಿತೆ ಇವುಗಳು ದೆಹಲಿ ಕರ್ನಾಟಕ ಸಂಘವು ಬಿಡುಗಡೆ ಮಾಡಿದ ಪ್ರಮುಖ ಪ್ರಕಟಣೆಗಳು. ಇಂದು ಈ ಪ್ರಕಟಣೆಗಳ ಪಟ್ಟಿಗೆ ಸೇರಲಿರುವ 'ನಿರಂಜನ ಕೃತಿ ಸ್ಮೃತಿ–ನಿರಂಜನ ನೀಲಾಂಜನ' ಪುಸ್ತಕದ ಲೋಕಾರ್ಪಣೆಗೊಳಿಸುವ ಸೌಭಾಗ್ಯ ಸಂತಸ ನನ್ನದಾಗಿದೆ.

'ನಿರಂಜನ'ರೆಂದೇ ಪ್ರಸಿದ್ಧಿ ಪಡೆದ ಕುಳಕುಂದ ಶಿವರಾಯರು ತಮ್ಮ 1924ರಿಂದ 1992ರವರೆಗಿನ ಜೀವನದಲ್ಲಿ ಜೀವನವನ್ನೇ ಒಂದು ವಿಶ್ವವಿದ್ಯಾಲಯವನ್ನಾಗಿ ಕಂಡವರು. ಜೀವನದ ಹಲವಾರು ಸಂಘರ್ಷಗಳ ಮಧ್ಯೆಯೋ, ಸಮಾಜದ ಬಗೆಗೆ ಯುವ ಜನಾಂಗದ ಬಗೆಗೆ ಅತೀವ ಕಾಳಜಿ ಬೆಳೆಸಿಕೊಂಡು ಪ್ರಗತಿಪರ ಚಿಂತಕರಾಗಿ ಅವರು ಕನ್ನಡ ಸಾಹಿತ್ಯಲೋಕಕ್ಕೆ ನೀಡಿದ ಕೃತಿಗಳು ಅಮೋಘವಾದುಗಳು. ಕ್ರಾಂತಿಕಾರಿ ವಿಚಾರಗಳನ್ನು ಮೃದುವಾಗಿ ಹೇಳಬಲ್ಲ ಕಲೆ ಅವರಿಗೆ ಕರಗತವಾಗಿತ್ತು ಎಂಬುದು ಅವರ ಕೃತಿಗಳನ್ನು ಹಲವು ಮಟ್ಟಿಗೆ ಓದಿದ ನನ್ನ ಅಭಿಪ್ರಾಯ. 25 ಕಾದಂಬರಿಗಳು, 10 ಕಥಾ ಸಂಗ್ರಹಗಳು, 5 ನಾಟಕಗಳು, 4 ಬಾನುಲಿ ರೂಪಕಗಳು, ಅನುವಾದಿತ ಕೃತಿಗಳು ಕನ್ನಡ ಸರಸ್ವತಿಗೆ ಇವರು ತೊಡಿಸಿದ ಮುತ್ತಿನ ಹಾರಗಳು. 'ಚಿರಸ್ಮರಣೆ' ಇವರ ಅಪರೂಪದ ಕೃತಿಯಾದರೆ, 'ತಾಯಿ' ಮ್ಯಾಕ್ಸಿಗೋರ್ಕಿಯವರ ಕಾದಂಬರಿ 'ಮದರ್' ಆಧಾರಿತ ಅತ್ಯುತ್ತಮ ಅನುವಾದ ಕೃತಿ.

ಡಾ. ಪುರುಷೋತ್ತಮ ಬಿಳಿಮಲೆಯವರ ನೇತೃತ್ವದಲ್ಲಿ ದೆಹಲಿ ಕರ್ನಾಟಕ ಸಂಘ ಆಯೋಜಿಸಿದ 'ನಿರಂಜನ ಕೃತಿ ಸ್ಮೃತಿ' ವಿಚಾರಗೋಷ್ಠಿಯಲ್ಲಿ ಮಂಡಿಸಲ್ಪಟ್ಟ ಲೇಖನಗಳೊಂದಿಗೆ ಹಲವು ಆಹ್ವಾನಿತ ಲೇಖನಗಳನ್ನು ಒಟ್ಟುಗೂಡಿಸಿ ಪ್ರಕಟಪಡಿಸಿದ ದೆಹಲಿ ಕರ್ನಾಟಕ ಸಂಘದ ಈ ಪುಸ್ತಕ ನಿಜಕ್ಕೂ ಆಧುನಿಕ ಪ್ರಗತಿಪರ ವಿಚಾರವಾದಿಯಾಗಿ, ಪತ್ರಕರ್ತರಾಗಿ, ಅಂಕಣಕಾರರಾಗಿ, ಕಾದಂಬರಿಕಾರರಾಗಿ ಓದುಗರಲ್ಲಿ ವೈಚಾರಿಕ ಬದಲಾವಣೆಯ ಹರಿಕಾರರಾಗಿದ್ದ ನಿರಂಜನರಿಗೆ, ಅವರ ಸಾಹಿತ್ಯ ಸೇವೆಗೆ ಮೆಚ್ಚಿ ದೆಹಲಿಯ ಕನ್ನಡಿಗರು ಅರ್ಪಿಸುತ್ತಿರುವ 'ನೀಲಾಂಜನ' ನಮನ ಎಂದು ಅವರು ನುಡಿದರು. ಡಾ. ಅಹಲ್ಯಾಚಿಂತಾಮಣಿ ಅವರು ಮಾತನಾಡುತ್ತ ದೆಹಲಿ ಕರ್ನಾಟಕ ಸಂಘವು ನನ್ನ 'ಅಕವಿತೆ' ಎಂಬ ಕವನ ಸಂಕಲನವನ್ನು ಹೊರತಂದಿದೆ ಇದು ನನಗೆ ಸಂತಸವನ್ನು ತಂದಿದೆ ಎಂದರು. ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ವಂದಿಸಿದರು. ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀಮತಿ ಪೂಜಾ ಪಿ. ರಾವ್ ಅವರು ಕಾರ್ಯಕ್ರಮ ನಿರೂಪಿಸಿದರು. ಖಜಾಂಚಿ ಶ್ರೀ ಕೆ.ಎಸ್.ಜಿ. ಶೆಟ್ಟಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಾಂಸ್ಕೃತಿಕ ಕಾರ್ಯಕ್ರಮವಾಗಿ ಬೆಂಗಳೂರಿನಿಂದ ಆಗಮಿಸಿದ ವಿದೂಷಿ ಗೀತಾಸಿರೀಶಾ ಮತ್ತು ಕುಮಾರಿ ಸ್ನಿಗ್ಧ ಅವರಿಂದ ಭರತನಾಟ್ಯ ಕಾರ್ಯಕ್ರಮವು ಪ್ರೇಕ್ಷಕರನ್ನು ಮನರಂಜಿಸಿತು. ಅ



***ಅಭಿಮತ ವರದಿ***

# ಸಂಘದ ಜಾನಪದ ಸಂಭ್ರಮ

ದೆಹಲಿ ಕರ್ನಾಟಕ ಸಂಘದ ವತಿಯಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಕರ್ನಾಟಕದ ವಿವಿಧ ಜಿಲ್ಲೆಗಳ 40 ಜಾನಪದ ಕಲಾವಿದರಿಂದ ಜಾನಪದ ಸಂಭ್ರಮ ಕಾರ್ಯಕ್ರಮವನ್ನು ಇದೇ ಸೆಪ್ಟೆಂಬರ್ 22ರಂದು ಸಂಘದ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು.

ಮಂಜಮ್ಮ ಜೋಗತಿ ಮತ್ತು ತಂಡದಿಂದ ಜೋಗತಿ ನೃತ್ಯ, ಸಂತೋಷ್ ಕುಮಾರ್ ಮತ್ತು ತಂಡದಿಂದ ಪೂಜಾಕುಣಿತ, ಮೈಲಾರಪ್ಪ ಮತ್ತು ತಂಡದಿಂದ ಗೊರವರ ನೃತ್ಯ ಹಾಗೂ ಯೋಗೇಂದ್ರ ಮತ್ತು ತಂಡದಿಂದ ಡೊಳ್ಳುಕುಣಿತ ಕಾರ್ಯಕ್ರಮವು ದೆಹಲಿ ಕನ್ನಡಿಗರ ಮನಸೂರೆಗೊಂಡಿತು.

ಇದೇ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟೀ ನಿರ್ದೇಶಕರಾದ ಶ್ರೀ ಬಲವಂತರಾವ್ ಪಾಟೀಲ, ಕಾರ್ಯಕ್ರಮದ ಸಂಚಾಲಕರಾದ ಶ್ರೀ ಜಗದೀಶ ಜಾಲ ಮತ್ತು ಸಹ ಸಂಚಾಲಕರಾದ ಶ್ರೀ ಮಹೇಶ್ ಅವರನ್ನು ದೆಹಲಿ ಕರ್ನಾಟಕ ಸಂಘದ ಪರವಾಗಿ ಹೂಗುಚ್ಛ ನೀಡಿ ಶಾಲು ಹೊದಿಸಿ ಅಭಿನಂದಿಸಲಾಯಿತು.

ಸಂಘದ ಖಜಾಂಚಿ ಶ್ರೀ ಕೆ.ಎಸ್.ಜಿ. ಶೆಟ್ಟಿ, ಜಂಟಿ ಕಾರ್ಯದರ್ಶಿ ಶ್ರೀಮತಿ ಜಮುನಾ ಸಿ. ಮಠದ, ಕಾರ್ಯಕಾರಿ ಸಮಿತಿಯ ಸದಸ್ಯರುಗಳಾದ ಡಾ. ಎಂ.ಎಸ್. ಶಶಿಕುಮಾರ್, ಶ್ರೀ ರಾಧಾಕೃಷ್ಣ, ಶ್ರೀ ತ್ಯಾಗೇಶ್ ಮೂರ್ತಿ ಹಾಗೂ ಶ್ರೀ ಸಂತೋಷ್ ಜೆ. ಅವರು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಡಾ. ಎಂ.ಎಸ್. ಶಶಿಕುಮಾರ್ ಅವರು ನಿರೂಪಿಸಿದರು. ಅ

*ಅಭಿಮತ ವರದಿ*



















# ಜೆಎನ್‌ಯು ಕನ್ನಡ ಭಾಷಾ ಪೀಠದಲ್ಲಿ ವಚನಗಳ ಕುರಿತು ತಮಿಳಿನಲ್ಲಿ ಉಪನ್ಯಾಸ



ಜವಾಹರಲಾಲ್ ನೆಹರೂ ವಿಶ್ವವಿದ್ಯಾನಿಲಯದ (ಜೆಎನ್‌ಯು) ಕನ್ನಡ ಭಾಷಾ ಅಧ್ಯಯನ ಪೀಠವು ತಮಿಳು ವಿಭಾಗದ ಸಹಯೋಗದಿಂದ ಇದೇ ಸೆಪ್ಟಂಬರ್ 18ರಂದು ಆಯ್ದ ವಚನಗಳನ್ನು ತಮಿಳಿಗೆ ಭಾಷಾಂತರಿಸಿ ಜೆಎನ್‌ಯುವಿನ ತಮಿಳು ಭಾಷಾ ವಿಭಾಗದಲ್ಲಿ ಸಂಶೋಧನೆ ನಡೆಸುವ ವಿದ್ಯಾರ್ಥಿಗಳಿಗಾಗಿ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಏರ್ಪಡಿಸಿತ್ತು.

ಈ ಕಾರ್ಯಕ್ರಮದಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ ಕನ್ನಡ ಹಾಗೂ ತಮಿಳು ಭಾಷೆಯ ಮೇಲೆ ಹಿಡಿತವಿರುವ ಶ್ರೀ ಸು ಶ್ರೀನಿವಾಸನ್ ಅವರು ಸುಮಾರು 50 ಕನ್ನಡದ ವಚನಗಳನ್ನು ತಮಿಳಿಗೆ ಭಾಷಾಂತರಿಸಿ ಅದರ ಪ್ರತಿಗಳನ್ನು ವಿದ್ಯಾರ್ಥಿಗಳಿಗೆ ನೀಡಿ ಅರ್ಥಪೂರ್ಣವಾಗಿ ವಿವರಿಸಿದರು. 'ಉದಯಂ ಶ್ರೀನಿವಾಸನ್' ಎಂದೇ ಖ್ಯಾತರಾದ ಅವರು ತಮಿಳಿನ ತಿರುಕುರುಳ ಕೃತಿಯನ್ನು ಕನ್ನಡದಲ್ಲಿ ಭಾಷಾಂತರಿಸಿದ್ದಾರೆ. ಈ ಕೃತಿಯನ್ನು ಮದ್ರಾಸಿನ ತಮಿಳು ಶಾಸ್ತ್ರೀಯ ಅಧ್ಯಯನ ಕೇಂದ್ರ ಪ್ರಕಟಿಸಿದೆ. ಈ ಸಂದರ್ಭದಲ್ಲಿ ತಮಿಳಿನ ತಿರುಮೂಲರ್ ಮೊದಲಾದ ಸಂತರೊಂದಿಗೆ ತೌಲನಿಕ ಅಧ್ಯಯನ ನಡೆಸಿ ಅಲ್ಲಮ, ಜೇಡರ ದಾಸಿಮಯ್ಯ, ಬಸವಣ್ಣ, ಅಕ್ಕ ಮಹಾದೇವಿ, ಸಿದ್ದರಾಮ ವಚನಗಳನ್ನು ವಾಚಿಸಿ ಅದರ ಅರ್ಥಸಹಿತ ವಿವರಿಸಿದರು.

ಈ ಸಂದರ್ಭಲ್ಲಿ ಪ್ರತಿಕ್ರಿಯಿಸಿದ ಫ್ರೆಂಚ್ ವಿಭಾಗದ ಪ್ರಾಧ್ಯಾಪಕರಾದ ಅಜಿತ್ ಕಣ್ಣನ್ ಅವರು ವಚನ ಚಳವಳಿಯು ಭಾಷೆ, ಧರ್ಮ, ಮಹಿಳೆ ಮತ್ತು ಸಮಾಜದ ಬಗ್ಗೆ ತೋರಿದ ಕಳಕಳಿ ಅಪಾರ ಎಂದು ಹೇಳಿದರು.

ಈ ಸಂದರ್ಭದಲ್ಲಿ ತಮಿಳು ವಿಭಾಗದ ದಾಮೋದರನ್ ಮತ್ತು ಚಂದ್ರಶೇಖರನ್ ಸೇರಿದಂತೆ ಇತರೆ ವಿಭಾಗಗಳ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಹಾಜರಿದ್ದರು. ಕನ್ನಡ ಅಧ್ಯಯನ ಪೀಠದ ಪುರುಷೋತ್ತಮ ಬಿಳಿಮಲೆಯವರು ಸ್ವಾಗತಿಸಿದರು. ಸಾತಿಯ ಕುಮಾರ್ ನಿರೂಪಿಸಿದರು ಮತ್ತು ಸಚ್ಚಿದಾನಂದಮ್ ವಂದಿಸಿದರು. ಅ

***ಡಾ. ಪುರುಷೋತ್ತಮ ಬಿಳಿಮಲೆ***

# ದೆಹಲಿ ಕನ್ನಡ ಶಾಲೆಯಲ್ಲಿ ವಿಶ್ವೇಶ್ವರಯ್ಯ ಜನ್ಮದಿನಾಚರಣೆ

ಭಾರತ ರತ್ನ ಸರ್ ಎಂ. ವಿಶ್ವೇಶ್ವರಯ್ಯ ಅವರ 158ನೇ ಜನ್ಮದಿನವನ್ನು ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯಲ್ಲಿ ಆಚರಿಸಲಾಯಿತು. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಕಾರ್ಯಕಾರಿ ಸಮಿತಿ ಸದಸ್ಯರಾದ ಡಾ. ಅಶೋಕ್ ಎಸ್. ಗೋನಾಳ್ ಅವರು ಸರ್. ಎಂ. ವಿಶ್ವೇಶ್ವರಯ್ಯ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಬಳಿಕ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡುತ್ತ ಕರ್ನಾಟಕ ಮಾತ್ರವಲ್ಲ ನಮ್ಮ ದೇಶದ ಒಟ್ಟಾರೆ ಬೆಳವಣಿಗೆಗೆ ಶ್ರಮಿಸಿದ ಹಾಗೂ ಈ ದೇಶದಲ್ಲಿ ಯೋಜನೆಗಳ ಕುರಿತು ಮೊಟ್ಟಮೊದಲು ಚಿಂತಿಸಿದ, ಮಾತನಾಡಿದ ವ್ಯಕ್ತಿ ವಿಶ್ವೇಶ್ವರಯ್ಯ. ಅವರು ಕೇವಲ ಓರ್ವ ವ್ಯಕ್ತಿಯಾಗಿರಲಿಲ್ಲ ಭಾರತದ ಸಮಗ್ರ ಆರ್ಥಿಕ ವ್ಯವಸ್ಥೆಗಾಗಿ ಭದ್ರ ಬುನಾದಿ ಹಾಕಿಕೊಟ್ಟ ಅದ್ಭುತ ಕನಸುಗಾರ. ಅವರ ವೈಜ್ಞಾನಿಕ ಚಿಂತನೆಗಳನ್ನು ಜೊತೆಗೆ ಬದುಕಿನ ಕ್ರಮವನ್ನು ಅಳವಡಿಸಿಕೊಂಡರೆ ಪ್ರತಿಯೊಬ್ಬ ವಿದ್ಯಾರ್ಥಿಯ ಬದುಕು ಸಾರ್ಥಕವಾಗುತ್ತದೆ ಎಂದು ಹೇಳಿದರು.

'ವಿಶ್ವೇಶ್ವರಯ್ಯ ಅವರ ವ್ಯಕ್ತಿತ್ತ ಹಾಗೂ ಸಾಧನೆಗಳು' ವಿಷಯದ ಕುರಿತಾಗಿ ವಿದ್ಯಾರ್ಥಿಗಳಾದ ಕು। ಮಹೇಶ್ ಹಾಗೂ ಕು। ಪಾರ್ವತಿ ಅವರು ಮಾತನಾಡಿದರು. ಸಾವಿರಾರು ಕನ್ನಡೇತರ ವಿದ್ಯಾರ್ಥಿಗಳಿಗೆ ಸರ್ ಎಂ. ವಿಶ್ವೇಶ್ವರಯ್ಯ ಅವರ ಕುರಿತಾಗಿ ತಿಳಿಸುವ ಈ ಕಾರ್ಯಕ್ರಮದಲ್ಲಿ ಸಂಸ್ಥೆಯ ಮಾನ್ಯ ಪ್ರಭಾರ ಪ್ರಾಂಶುಪಾಲರಾದ ಶ್ರೀಮತಿ ಎನ್. ವಿಜಯಕುಮಾರಿ ಉಪಸ್ಥಿತರಿದ್ದರು. ಶ್ರೀಮತಿ ಮಾಲಾ ಗೋಪಾಲ್ ಅವರು ಕಾರ್ಯಕ್ರಮ ನಿರೂಪಿಸಿದರು. ಅ

***ಅರವಿಂದ ಬಿಜ್ಜೆ***






# ಸುಧೀರ್ ಫಡ್ನೀಸ್ ಅವರಿಗೆ ರಾಷ್ಟ್ರೀಯ ಪ್ರಶಸ್ತಿ

ದೆಹಲಿಯ ಕನ್ನಡಿಗ ಚಿತ್ರಕಲಾವಿದ ಸುಧೀರ ವಿ. ಫಡ್ನೀಸ್ ಅವರಿಗೆ ಭಾರತ ಸರಕಾರದ ಜವಳಿ ಇಲಾಖೆ ನೀಡುವ 2016ನೇ ಸಾಲಿನ ರಾಷ್ಟ್ರೀಯ ಪ್ರಶಸ್ತಿಯು ದೊರೆತಿದೆ. ಈ ಪ್ರಶಸ್ತಿಯನ್ನು ಜವಳಿ ಖಾತೆಯ ಸಚಿವೆ ಶ್ರೀಮತಿ ಸ್ಮೃತಿ ಇರಾನಿ ಅವರು, ಛತ್ತೀಸಗಢದ ಮುಖ್ಯಮಂತ್ರಿ ರಮಣ್ ಸಿಂಗ್ ಅವರ ಸಮ್ಮುಖದಲ್ಲಿ ರಾಯಪುರದಲ್ಲಿ ಇದೇ ಸಪ್ಟಂಬರ್ 14ರಂದು ಫಡ್ನೀಸ್ ಅವರಿಗೆ ಪ್ರದಾನ ಮಾಡಿದರು.

ಅವರ ಅಪರೂಪದ ಸಾಂಪ್ರದಾಯಿಕ 'ಬಾಟಿಕ್ ಆರ್ಟ್'ನ ಮೂಲಕ ಮೈಸೂರು ದಸರಾದ ದೃಶ್ಯಗಳನ್ನು ರಚಿಸಿರುವ ಕಲಾಕೃತಿಗೆ ಕೇಂದ್ರ ಸರ್ಕಾರದ ಜವಳಿ ಇಲಾಖೆಯಿಂದ ಈ ಪ್ರಶಸ್ತಿಯು ದೊರಕಿದೆ. ಮೇಣ ಮತ್ತು ಬಣ್ಣ ಉಪಯೋಗಿಸಿ, ಬಟ್ಟೆಯ ಮೇಲೆ ಚಿತ್ರ ಮೂಡಿಸುವುದೇ ಬಾಟಿಕ್ ಕಲೆಯಾಗಿದೆ. ಫಡ್ನೀಸ್ ಅವರು ಈ ಹಿಂದೆ ದೆಹಲಿ ಕರ್ನಾಟಕ ಸಂಘದ ಆರ್ಟ್ ಗ್ಯಾಲರಿಯಲ್ಲಿ ಬಾಟಿಕ್ ಕಲೆಯ ಪ್ರದರ್ಶನವನ್ನು ನಡೆಸಿದ್ದರು.

*ಅಭಿಮತ ವರದಿ*



## ಗುರ್‌ಗಾಂವ್ ಕನ್ನಡ ಕಲಿಕಾ ಕೇಂದ್ರದಲ್ಲಿ ಶಿಕ್ಷಕರ ದಿನಾಚರಣೆ



**ಗು**ರುಗಾಂವ್ ಕನ್ನಡ ಕಲಿಕಾ ಕೇಂದ್ರದಲ್ಲಿ ಶಿಕ್ಷಕರ ದಿನಾಚರಣೆಯನ್ನು ಆಚರಿಸಲಾಯಿತು. ಇದೇ ಸಂದರ್ಭದಲ್ಲಿ ಗುರುಗಾಂವ್ ಕನ್ನಡ ಕಲಿಕಾ ಕೇಂದ್ರ ಶಿಕ್ಷಕರಾದ ಶ್ರೀ ಅರವಿಂದ್ ಬಿಜ್ಜೆ, ಮತ್ತು ಶಿಕ್ಷಕಿಯಾದ ಶ್ರೀಮತಿ ಸುಜಾತ, ನಿಂಬಾಳ್, ಚೋಟು ರಾಮ್ ಭವನದ ಅಧ್ಯಕ್ಷರಿಗೆ ಹಾಗೂ ಪ್ರಾಂಶುಪಾಲರಾದ ಶ್ರೀ ಜಗದೀಶ ಡಿಲನ್ ಅವರಿಗೆ ಶಾಲು ಮತ್ತು ಸ್ಮರಣಿಕೆ ನೀಡಿ ಗೌರವಿಸಲಾಯಿತು.

*ಎಂ. ಮರಿಬಸಪ್ಪ*



ಇತ್ತೀಚೆಗೆ ದೆಹಲಿಯ ಸಿರಿಫೋರ್ಟ್ ಆಡಿಟೋರಿಯಂನಲ್ಲಿ ನಡೆದ 'ಯೋನೆಕ್ಸ್ ಸೈನ್‌ರೈಸ್ ಇಂಟರ್ ಸ್ಕೂಲ್ ಟೆನ್ನಿಸ್ ಚಾಂಪಿಯನ್ ಶಿಪ್'ನಲ್ಲಿ ರಾಷ್ಟ್ರಮಟ್ಟದ ಶಾಲೆಗಳ ಟೆನ್ನಿಸ್‌ನಲ್ಲಿ ದೆಹಲಿಯನ್ನು ಪ್ರತಿನಿಧಿಸಿರುವ ಕು. ಲಕ್ಷ್ಮೀ ಗೌಡ ಅವರು ಪ್ರಥಮ ಸ್ಥಾನವನ್ನು ಪಡೆದಿದ್ದಾರೆ.

ಸಂಸ್ಕೃತಿ ಸ್ಕೂಲ್ ಚಾಣಕ್ಯಪುರಿಯ ವಿದ್ಯಾರ್ಥಿನಿಯಾಗಿರುವ ಕುಮಾರಿ ಲಕ್ಷ್ಮೀ ಗೌಡ ಪ್ರಸ್ತುತ 8ನೇ ತರಗತಿಯಲ್ಲಿ ಓದುತ್ತಿರುವ ಅವರು ದೆಹಲಿ ಕರ್ನಾಟಕ ಸಂಘದ ಸಕ್ರಿಯ ಸದಸ್ಯರಾದ, ದೆಹಲಿ ಪೊಲೀಸ್‌ನಲ್ಲಿ ಡೆಪ್ಯೂಟಿ ಕಮಿಷನರ್ ಆಫ್ ಪೊಲೀಸ್ ಆಗಿರುವ ಶ್ರೀ ಬಿ.ಎಲ್. ಸುರೇಶ್ ಅವರ ಪುತ್ರಿಯಾಗಿದ್ದಾರೆ.

ಲಕ್ಷ್ಮೀ ಗೌಡ ಅವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳು.

*ಅಭಿಮತ ವರದಿ*





# ಸಂಘದಲ್ಲಿ ಗಣೇಶ ಸಾಂಸ್ಕೃತಿಕ ಉತ್ಸವ

ಪ್ರತಿ ವರ್ಷದಂತೆ ಈ ವರ್ಷವೂ ಕೂಡಾ ದೆಹಲಿ ಕರ್ನಾಟಕ ಸಂಘವು ಗಣೇಶ ಸಾಂಸ್ಕೃತಿಕ ಉತ್ಸವವನ್ನು ಅತ್ಯಂತ ಭಕ್ತಿ, ಶ್ರದ್ಧೆ ಮತ್ತು ಭಾವನಾತ್ಮಕವಾಗಿ ವಿಜೃಂಭಣೆಯಿಂದ ನಡೆಸಿತು. ಇದೇ ಸೆಪ್ಟೆಂಬರ್ 13ರಂದು ಬೆಳಿಗ್ಗೆ ಸ್ಥಳೀಯ ರಾಘವೇಂದ್ರ ಸ್ವಾಮಿ ಮಠದ ಆಚಾರ್ಯರ ಮೂಲಕ ವಿಧಿಯುಕ್ತವಾಗಿ ಸ್ಥಾಪನೆ, ಪೂಜೆ ಹಾಗೂ ಮಂಗಳಾರತಿಯ ಮೂಲಕ ಸಂಘದ ಎಲ್ಲ ಪದಾಧಿಕಾರಿಗಳು ಹಲವಾರು ಹಿರಿಯ ಸದಸ್ಯರುಗಳ ಸಮ್ಮುಖದಲ್ಲಿ ನೆರವೇರಿತು.

ನಿರಂತರವಾಗಿ ಮೂರು ದಿನಗಳ ಕಾಲ ಬೆಳಿಗ್ಗೆ ಮತ್ತು ಸಂಜೆ ನೈವೇದ್ಯ, ಪೂಜೆ, ಮಂಗಳಾರತಿ ಕಾರ್ಯಕ್ರಮ ದೆಹಲಿಯ ಹಲವಾರು ಭಕ್ತ ಜನಗಳ ಸಮ್ಮುಖದಲ್ಲಿ ನಡೆಯಿತು. ಸೆಪ್ಟೆಂಬರ್ 15ರಂದು ಮಹಾಮಂಗಳಾರತಿಯ ನಂತರ ಸರ್ವಾಲಂಕೃತನಾದ ವಿಘ್ನರಾಜ ಮೂರ್ತಿಯನ್ನು ನೆರೆದಿದ್ದ ನೂರಾರು ಭಕ್ತಜನರು ದೈವಘೋಷಣೆಗಳನ್ನು ಕೂಗುತ್ತ ಯಮುನಾ ನದಿ ತೀರಕ್ಕೆ ಕೊಂಡೊಯ್ದು ಮತ್ತೊಮ್ಮೆ ಅಲ್ಲಿ ಭಕ್ತಿಯಿಂದ ಪೂಜೆ ಸಲ್ಲಿಸಿ ವಿಧಿಯೋಕ್ತವಾಗಿ ವಿಸರ್ಜಿಸಲಾಯಿತು. ಈ ಬಾರಿಯ ಗಣೇಶ ಉತ್ಸವದ ಮಂಟಪದ ಅಲಂಕಾರವನ್ನು ಹಿರಿಯ ಕಲಾವಿದರಾದ ಶ್ರೀ ಚೆನ್ನು ಎಸ್. ಮಠದ ಅವರು ನಡೆಸಿಕೊಟ್ಟರು. ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ರಾಧಾಕೃಷ್ಣ ಅವರು ಗಣೇಶ ಸಾಂಸ್ಕೃತಿಕ ಉತ್ಸವದ ಸಂಚಾಲಕರಾಗಿದ್ದರು.

***ಅಭಿಮತ ವರದಿ***



# ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಶನ್‌ನಿಂದ ಗಣೇಶ ಹಬ್ಬ

ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಶನ್‌ನ ಸದಸ್ಯೆಯರು ಸಂಘದ ಆವರಣದಲ್ಲಿ ಇದೇ ಸೆಪ್ಟೆಂಬರ್ 15ರಂದು ಗಣೇಶ ಹಬ್ಬವನ್ನು ಭಕ್ತಿಪೂರ್ವಕವಾಗಿ ಸಂಭ್ರಮದಿಂದ ಆಚರಿಸಿದರು. ಸದಸ್ಯೆಯರೆಲ್ಲಾ ಸೇರಿ ಪೂಜೆ, ಭಜನೆ ಮಾಡಿದರು.

***ಲೀಲಾವತಿ ಗುರುಪ್ರಸಾದ್***

# ಗಣೇಶ ಮಿತ್ರ ಮಂಡಳಿಯ ೩೦ನೇ ಗಣೋಶೋತ್ಸವ




ಗಣೇಶ ಮಿತ್ರ ಮಂಡಳಿಯು 30ನೇ ಗಣೇಶೋತ್ಸವವನ್ನು ಇದೇ ಸೆಪ್ಟೆಂಬರ್ 13ರಂದು ಸಂಭ್ರಮದಿಂದ ಆಚರಿಸಿತು

***ಅಭಿಮತ ವರದಿ***



# ಕನ್ನಡ ವಿದ್ಯಾ ಸಂಸ್ಥೆಯಲ್ಲಿ ಗಣೇಶ ಚತುರ್ಥಿ

ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆ, ಲೋಧಿ ಎಸ್ಟೇಟ್ ಇಲ್ಲಿ 'ಗಣೇಶ ಚತುರ್ಥಿ' ಹಬ್ಬವನ್ನು ಭಕ್ತಿ ಪೂರ್ವಕವಾಗಿ ಹಾಗೂ ಸಂಭ್ರಮದಿಂದ ಇದೇ ಸೆಪ್ಟೆಂಬರ್ 13ರಂದು ಆಚರಿಸಲಾಯಿತು. ಹೂವಿನಿಂದ ಅಲಂಕೃತಗೊಂಡ ವಿದ್ಯೆಯ ಹಾಗೂ ಜ್ಞಾನದ ಅಧಿಪತಿಯಾದ ಗಣಪನಿಗೆ ಸಂಸ್ಥೆಯ ಸಂಸ್ಕೃತ ಶಿಕ್ಷಕರು ಹಾಗೂ ಪಂಡಿತರಾದ ಶ್ರೀ ಗಣೇಶ ಹೆಗಡೆ ಅವರ ಪೌರೋಹಿತ್ಯದಲ್ಲಿ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಕೆ. ಆರ್. ರಾಮಮೂರ್ತಿ ಹಾಗೂ ವ್ಯವಸ್ಥಾಪಕರಾದ ಶ್ರೀ ಶಿವಾನಂದ ಸಿರ್ಸಿಕರ್ ಅವರು ಪೂಜಾ ವಿಧಿವಿಧಾನಗಳನ್ನು ನೆರವೇರಿಸಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಎಸ್.ಡಿ. ಶ್ರೀನಿವಾಸ್, ಪ್ರಭಾರ ಪ್ರಾಂಶುಪಾಲರಾದ ಶ್ರೀಮತಿ ಎನ್. ವಿಜಯಕುಮಾರಿ ಉಪಸ್ಥಿತರಿದ್ದರು. ಶ್ರದ್ಧಾಭಕ್ತಿಯ, ಸಂಭ್ರಮದ ಈ ಆಚರಣೆಯಲ್ಲಿ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರು, ಎಲ್ಲಾ ಶಿಕ್ಷಕ, ಶಿಕ್ಷಕೇತರ ವೃಂದದವರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಪಾಲ್ಗೊಂಡು ವಿಘ್ನ ವಿನಾಶಕನ ದರ್ಶನ ಪಡೆದರು. ಬಳಿಕ ಸೂರ್ಯಾಸ್ತದ ಸಮಯದಲ್ಲಿ ವಿವಿಧ ಪೂಜಾ ವಿಧಿವಿಧಾನಗಳನ್ನು ಪಡೆದ ಗಣಪನನ್ನು ಶಾಲಾ ವಠಾರದಲ್ಲೇ ವಿಸರ್ಜನೆ ಮಾಡಲಾಯಿತು. ಅ

*ಅರವಿಂದ ಬಿಜ್ಜೈ*

# ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿಯ ಗಣೇಶೋತ್ಸವ



ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿಯು ಇದೇ ಸೆಪ್ಟೆಂಬರ್ 13ರಂದು ಪೂಜಾ ಭಜನೆಗಳ ಪ್ರಸಾದ ವಿನಿಯೋಗದ ಜೊತೆ ಗಣೇಶಮೂರ್ತಿ ಪ್ರತಿಷ್ಠಾಪನೆ ಮಾಡಲಾಯಿತು. ಹಾಗೂ ಸೆಪ್ಟೆಂಬರ್ 16ರಂದು ಅಶೋಕ್ ವಿಹಾರ್ ಪೋಲಿಸ್ ಕಾಲೋನಿ ಸಮುದಾಯ ಭವನದಲ್ಲಿ ಶ್ರೀ ವಿನಾಯಕನ ಭಕ್ತಾದಿಗಳು ಹಾಗೂ ಸಮಸ್ತ ದೆಹಲಿ ಪೋಲಿಸ್ ಕನ್ನಡಿಗರ ಸದಸ್ಯರು ಹಾಗೂ ಕುಟುಂಬವರ್ಗದವರು ಭಾಗವಹಿಸಿದ್ದರು. ಅ

*ಎ.ಟಿ. ಶ್ರೀನಿವಾಸ್*

# ಗುರ್‌ಗಾಂವ್ ಕನ್ನಡ ಸಂಘದಿಂದ ಶ್ರೀಗಣೇಶ ಉತ್ಸವ



ಪ್ರತಿವರ್ಷದಂತೆ ಈ ವರ್ಷವೂ ಗುರ್‌ಗಾಂವ್ ಕನ್ನಡ ಸಂಘವು ಶ್ರೀ ಗಣೇಶ ಉತ್ಸವವನ್ನು ಇದೇ ಸೆಪ್ಟೆಂಬರ್ 13 ರಿಂದ 16ರವರೆಗೆ ಗುರ್‌ಗಾಂವ್‌ನ ಶ್ರೀ ರಾಧಾಕೃಷ್ಣ ಮಂದಿರದಲ್ಲಿ ಅತ್ಯಂತ ಸಂಭ್ರಮ, ಶ್ರದ್ಧೆ ಮತ್ತು ಭಕ್ತಿಯಿಂದ ಆಚರಿಸಲಾಯಿತು. ಶ್ರೀ ಗಣೇಶ ಪ್ರತಿಷ್ಠಾಪನೆಯನ್ನು ಗುರುವಾರ ಬೆಳಿಗ್ಗೆ 10 ಗಂಟೆಗೆ ಮಾಡಲಾಯಿತು. ಪ್ರತಿದಿನ ಬೆಳಿಗ್ಗೆ ಹಾಗೂ ಸಂಜೆ ಪೂಜೆ ನಡೆಯಿತು. ಎಲ್ಲಾ ಕನ್ನಡಿಗರು ತಮ್ಮ ಪರಿವಾರ ಸಮೇತ ನಾಲ್ಕು ದಿನಗಳು ಶ್ರೀಗಣೇಶನ ಪೂಜೆಯ ಕಾರ್ಯಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಕಳೆದ ಬಾರಿಯಂತೆ ಈ ಬಾರಿ ಪ್ರತಿದಿನ ರಾತ್ರಿ ಪ್ರಸಾದ ಮತ್ತು ಭೋಜನ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡಲಾಗಿತ್ತು. ಅಕ್ಕಪಕ್ಕದ ರಾಜ್ಯದ ಕನ್ನಡದ ಸ್ನೇಹಿತರು ಮತ್ತು ಅವರ ಜೊತೆಗೆ ಸ್ಥಳೀಯ ಕನ್ನಡೇತರ ಸ್ಥಳೀಯರು ಉಪಸ್ಥಿತಿ ಮತ್ತು ಅವರ ತನು-ಮನ-ಧನದ ಸಹಕಾರವು ಮೆಚ್ಚುವಂತಿತ್ತು. ಸ್ಥಳೀಯ ಕನ್ನಡಿಗರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಗಣೇಶ ಮಂಟಪವನ್ನು ಹೋಂಡಾ ಮತ್ತು ಹೀರೋ ಕನ್ನಡಿಗರು ಸೇರಿ ಸುಂದರವಾಗಿ ಅಲಂಕರಿಸಿದರು ಮತ್ತು ಸಂತೋಷ್ ಕೆ.ಕೆ., ಬೋಪಣ್ಣ ತಂಡ ಸೇರಿ ಮಾಡಿದ ರುಚಿ ರುಚಿಯಾದ ಅಡುಗೆ ರುಚಿ ಸವಿಯಲು ಆನಂದವಾಯಿತು. ಈ ಕಾರ್ಯಕ್ರಮಕ್ಕೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಶ್ರಮಿಸಿದ ಎಲ್ಲರಿಗೂ ದಾನಿಗಳಿಗೆ ಗುರ್‌ಗಾಂವ್ ಕನ್ನಡ ಸಂಘದ ವತಿಯಿಂದ ಧನ್ಯವಾದಗಳನ್ನು ಅರ್ಪಿಸಲಾಯಿತು. ಅ

*ಕೃಷ್ಣಪ್ಪ ಎಂ.*





# ಜನಕಪುರಿ ಕನ್ನಡ ಕೂಟದಲ್ಲಿ ಗಣೇಶಪೂಜೆ

ಜನಕಪುರಿ ಕನ್ನಡ ಕೂಟವು ಗಣೇಶಪೂಜೆ, ಕೂಟರತ್ನ ಪ್ರಶಸ್ತಿ, ಆಟೋಟ ಸ್ಪರ್ಧೆಗಳ ಬಹುಮಾನ ವಿತರಣೆ ಹಾಗೂ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ಜನಕಪುರಿ ರಾಮಮಂದಿರದಲ್ಲಿ ಇದೇ ಸೆಪ್ಟೆಂಬರ್ 16ರಂದು ಏರ್ಪಡಿಸಿತ್ತು. ಪೂಜೆಯ ಜೊತೆಯಲ್ಲಿ ಅಪೂರ್ವ ಅಕಾಡೆಮಿಯ ಮಕ್ಕಳು ಭರತನಾಟ್ಯವನ್ನು ಪ್ರದರ್ಶಿಸಿದರು. ಜನಕಪುರಿ ಹಾಗೂ ದೆಹಲಿಯ ಹಿರಿಯ ಸದಸ್ಯರಾದ ಶ್ರೀ ಕೆ.ಎಸ್.ಜಿ. ಶೆಟ್ಟಿಯವರಿಗೆ 'ಕೂಟರತ್ನ' ಪ್ರಶಸ್ತಿಯನ್ನು ನೀಡಿ ಅವರ ಸೇವೆಯನ್ನು ಗೌರವಿಸಲಾಯಿತು. ಆಟೋಟ ಸ್ಪರ್ಧೆಗಳ ಬಹುಮಾನ ವಿತರಣೆಯ ನಂತರ ಜನಕಪುರಿ ಮಹಿಳಾ ಮಂಡಳಿಯ ಸದಸ್ಯೆಯರಿಂದ ಭಕ್ತಿಗೀತೆಗಳ ಕಾರ್ಯಕ್ರಮ ನಡೆಯಿತು. ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲಿ ಶ್ರೀ ಕೃಷ್ಣರಾಜ್ ಕೆ.ಎನ್. ಅವರನ್ನು ಕೂಟದ ಜಂಟಿ ಕಾರ್ಯದರ್ಶಿಯಾಗಿ ಆಯ್ಕೆ ಮಾಡಲಾಯಿತು. ಅ

***ವೆಂಕಟೇಶ್ ಎಂ.ವಿ.***

# ದಾರಿಯ ಸೊಗಸು

ಈ ದಾರೀಲಿ ನಡೆವ
ಸೊಗಸು ಏನೆನ್ನಲಿ ನೀನಿಲ್ಲದೆ
ಆ ದಾರೀಲಿ ನಾ ಹೇಗೆ ಸಾಗಲಿ,
ಸುಂದರವಿದು ಕಾಣುತಿಹುದು
ಬಹು ದೂರದ ಪಯಣವಿಹುದು
ಇಕ್ಕೆಲದಲಿ ಹಸಿರು ವನ
ಮುದಗೊಳುತಿಹುದೆನ್ನ ಮನ
ಒಂಟಿಯಾಗಿ ಕ್ರಮಿಸಲಾರೆನೆನ್ನುತಿಹುದೆನ್ನಮನ
ದೂರದಲೊಂದಾಸೆಯಿಹದು
ಸಂಭ್ರಮದಿಂ ಕರೆಯುತಿಹುದು
ಓಡಲಾಗದು,ಓಡಿ ಬೀಳಲಾಗದು
ಸುಮ್ಮನಿದ್ದು ವ್ಯರ್ಥಸಮಯ ಕಳೆಯಲಾಗದು
ಏನು ಹೇಳಲಿದರ ಪರಿ
ಕಲ್ಲು ಮುಳ್ಳು ಇರದ ದಾರಿ
ಇಕ್ಕೆಲದಲಿ ಹಸಿರು ನಾರಿ,
ಸೀರೆ ಧರಿಸಿ ನಿಂತಿಹಳೀ ಹಸಿರು ಸುಂದರಿ.
ಈ ಹಸಿರಿನತಂಬೆಲರಲಿ
ಈ ಹರುಷದನಡಿಗೆಯಲಿ
ಈ ನನ್ನ ಸಾಗುವಿಕೆಯಲಿ
ಜೊತೆಯಾಗಿಹೆ ಸಂಗಾತಿಯೆ ನಾನೇನೆನ್ನಲಿ
ಕ್ಷಮಿಸೆನ್ನನು ಭೂ ತಾಯಿಯೇ
ನನ್ನೀ ಉದ್ಧಟತನವ ಮರೆಯೇ
ಸಂತಸದ ಈಕ್ಷಣಗಳಲಿ ನಾನಿನ್ನ ಮರೆಯೇ
ಸುಗಮವಾಯಿತು ನಮ್ಮ ಈ ಮಧುರ ನಡಿಗೆ
ತೆರಳುವೆವು ನೆಮ್ಮದಿಯೆ ಆ ಆಶಾಕಿರಣದೆಡೆಗೆ
ಶಿರಬಾಗುವೆ ನಮ್ಮ ಈ ಸುಂದರ ಧರೆಗೆ
ಪೂರೈಸಿದೆ ನಮ್ಮಿಚ್ಛೆಯನು ಅಡಿಗಡಿಗೆ
ನಮಿಸುವೆನು ನೆಮ್ಮದಿಯಲೀ ಸುಂದರಧರೆಗೆ
ನಮಿಸುವೆನು ಹರುಷದಲಿ ನಮ್ಮೀ ವಸುಂಧರೆಗೆ.

***ಜಮುನಾ ಸಿ ಮಠದ***



ಶಿವಮೊಗ್ಗೆಯ ತೀರ್ಥಹಳ್ಳಿ ರಸ್ತೆಯ ಛಾಯಾಚಿತ್ರ
ಕೃಪೆ–ಸುಮಾ ಕಳಸಾಪುರ

# ದೆಹಲಿ ಕರ್ನಾಟಕ ಸಂಘ

# DELHI KARNATAKA SANGHA

**Sector-12, Rao Tula Ram Marg, R.K.Puram, New Delhi – 110022**

ದೆಹಲಿ ಕರ್ನಾಟಕ ಸಂಘವು 2018–19ನೇ ಸಾಲಿನ ವಿವಿಧ ಕ್ರೀಡಾ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳನ್ನು ವಾರ್ಷಿಕೋತ್ಸವದ ಅಂಗವಾಗಿ ಅಕ್ಟೋಬರ್ 27 ಮತ್ತು 28, 2018ರಂದು ದೆಹಲಿ ಕನ್ನಡ ಶಾಲೆಯ ಆವರಣದಲ್ಲಿ ಆಯೋಜಿಸಿದೆ. ಸಂಘದ ಸದಸ್ಯರು ಮತ್ತು ಅವರ ಕುಟುಂಬದವರು ಈ ಸ್ಪರ್ಧೆಗಳಲ್ಲಿ ಭಾಗವಹಿಸಿ, ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ವಿನಂತಿ.

Delhi Karnataka Sangha is organizing various Sports and Cultural events as part of the Annual Day Celebration for the year 2018-19 on Oct 27 & 28, 2018 at Delhi Kannada School premises.

The focus of the Sangha is to encourage the members and their children to participate in the events organised by the Sangha. Members are, therefore, requested to make use of the opportunity wholeheartedly by participating in the events.

Please find enclosed Programme Schedule, Entry Form, and Rules for the Competitions for your kind information.

**Vasantha Shetty Bellare**
President

**C.M. Nagaraja**
General Secretary

---

## Entry Form for Sports and Cultural Competitions

(Please see instructions and table of events)

| Sl. No | Name of the Participant & Phone / Mobile No. | Age (Yrs.) as on 01.09.2018 | Date of Birth | Sex M/F | Event Code | Total No of Events | Amount (Rs.) |
|---|---|---|---|---|---|---|---|
| 1. | | | | | | | |
| 2. | | | | | | | |
| 3. | | | | | | | |
| 4. | | | | | | | |
| 5. | | | | | | | |
| 6. | | | | | | | |
| | | | | | | **Total** | |

***Note: Enclose Copy of Birth Certificate.***

I ______________________________ shall abide by the Rules/regulations of the Competition. The Sangha shall not be held responsible for any accidental eventualities during the events.

…………………………..

Name of the Member: Signature of Participant/

Membership No: (Parent in case of Minor)

Membership: Life / Annual

Tel/Mobile No : Date:

***Note : Table of events, entry form, rules for competitions are enclosed herewith***

## *RULES FOR COMPETITIONS*

1. Participant / Parents must be member of Delhi Karnataka Sangha.
2. Entry fee for events

   i) Throw Ball) – Rs. 500/-

   ii) Entry fee for Lagori – Rs. 300/-

   iii) Entry fee for Shuttle Badminton, Carrom & Chess – Rs. 100/-each

   iv) All individual events fees – Rs. 50/-

   v) Entry fee for Children events Rs. 25/- (Jan Ist 2004 & above)
3. Entry forms must be submitted at Delhi Karnataka Sangha Office. (All the participants shall attach a photocopy of Birth Certificate alongwith entry forms)
4. Last date for entry for all events **22.10.2018** till **2.00**pm.
5. For details of events, please refer Programme Schedule attached.
6. Non-reporting of the participants at the stipulated time may result in awarding walkover.
7. Sports Organising Committee has the right to cancel the events depending upon the response and need of the hour.
8. Any change regarding the venue will be intimated separately.
9. **Fixture / Ties** will be drawn two days before the beginning of the competition.
10. The Participants are requested to bring the Sports Materials (Racquet, Striker etc) required for the events by themselves.
11. The modalities of conducting the events shall be notified from time to time at Notice Board of the Sangha.
12. Participants shall reach the venue of the events at their own conveyance.
13. While the persons in charge will be responsible for conducting events, they may take additional assistance of persons of their choice in consultation with the Convener of the Sports Sub- Committee.
14. Use of Stencils, Chalk-Piece, Pencil, Sieving and Pen is not permitted in Rangoli Competition.
15. For any event, if there are less than 4 participants that event may be cancelled.
16. The decision of the Sports Organising Committee / Organiser shall be the final in respect of conducting/ cancellation of the event, subject to the minimum entry response required, non-availability of resources to conduct competitions etc.
17. In case of cultural events, the judgments given by the panel of judges will be final.
18. Track event prizes: First, Second & Third. For other events: First & Second only.

**DR. M S SHASHIKUMAR**
CHAIRMAN

**C M NAGARAJA**
CONVENOR

**SPORTS SUB COMMITTEE**

# Delhi Karnataka Sangha
## Annual Day Sports Events 2018-19
## October 27th & 28th, 2018
### Venue : Delhi Kannada School, Lodhi Road, New Delhi

| Code No. | Event | Category | Age | Date |
|---|---|---|---|---|
| 1 | Lagori (Mix-2 Male+2 Female) | | | 27.10.18 |
| 2 | Throw Ball (10 Members-Women) | | | 27.10.18 |
| 3 | Volley Ball (Men) | | | 27.10.18 |
| 4 | Running Race 50 Mtrs. | Boys | 6-10 yrs | 28.10.18 |
| 5 | Running Race 50 Mtrs. | Girls | 6-10 yrs | 28.10.18 |
| 6 | Ball in Bucket | Girls | 6-20 Yrs | 28.10.18 |
| 7 | Three Leg Race 100 Mtrs. | Boys | 8-12 Yrs | 28.10.18 |
| 8 | Three Leg Race 100 Mtrs. | Girls | 8-12 Yrs | 28.10.18 |
| 9 | 4X100 Mtrs. Relay | Boys | 11-15 Yrs | 28.10.18 |
| 10 | 4X100 Mtrs. Relay | Girls | 11-15 Yrs | 28.10.18 |
| 11 | Running Race 100 Mtrs. | Boys | 11-15 yrs | 28.10.18 |
| 12 | Running Race 100 Mtrs. | Girls | 11-15 yrs | 28.10.18 |
| 13 | Running Race 200 Mtrs. | Boys | 11-16 yrs | 28.10.18 |
| 14 | Running Race 200 Mtrs. | Girls | 11-16 yrs | 28.10.18 |
| 15 | Three Leg Race 100 Mtrs. | Boys | 13 -17 yrs | 28.10.18 |
| 16 | Three Leg Race 100 Mtrs. | Girls | 13 -17 yrs | 28.10.18 |
| 17 | Ball in Bucket | Boys | below 15 Yrs | 28.10.18 |
| 18 | Running Race 100 Mtrs. | Girls | 17-20 yrs | 28.10.18 |
| 19 | Running Race 100 Mtrs. | Boys | 17 & above | 28.10.18 |
| 20 | Musical Chair | Girls | below 20 Yrs | 28.10.18 |
| 21 | Musical Chair | women | 21 & above | 28.10.18 |
| 22 | Ball in Bucket | women | 21 & above | 28.10.18 |
| 23 | Lemon & Spoon 100 Mtrs. | Women | 21 TO 36 Yrs | 28.10.18 |
| 24 | Shot-Put | Women | Below 35 Yrs | 28.10.18 |
| 25 | Shot-Put | Men | Below 35 Yrs | 28.10.18 |
| 26 | Running Race 100 Mtrs. | Women | 21-35 years | 28.10.18 |
| 27 | Shot-Put | Women | 36 above | 28.10.18 |
| 28 | Running Race 100 Mtrs. | Women | 36 & above | 28.10.18 |
| 29 | Shot-Put | Men | 36-49 yrs | 28.10.18 |
| 30 | Lemon & Spoon 100 Mtrs. | Women | 37 above | 28.10.18 |
| 31 | Speed Walk 400 Mtrs. | Women | 41-49 Yrs. | 28.10.18 |
| 32 | Threading the Needles | Common | 45 above | 28.10.18 |
| 33 | Speed Walk 400 Mtrs. | Women | 50 above | 28.10.18 |
| 34 | Threading the Needles | Common | Open | 28.10.18 |
| 35 | Shuttle Badminton Singles | Men | Open | 28.10.18 |
| 36 | Shuttle Badminton Singles | Women | Open | 28.10.18 |
| 37 | 4X100 Mtrs. Relay | Men | Open | 28.10.18 |
| 38 | 4X100 Mtrs. Relay | Women | Open | 28.10.18 |
| 39 | Running Race 200 Mtrs. | Men | Open | 28.10.18 |
| 40 | Running Race 400 Mtrs. | Men | Open | 28.10.18 |
| 41 | Running Race 100 Mtrs. | Women | Open | 28.10.18 |
| 42 | Running Race 200 Mtrs. | women | Open | 28.10.18 |
| 43 | Three Leg Race 100 Mtrs. | Men | Open | 28.10.18 |

# ದೇಶದ ಮನಸುಗಳನ್ನು ಬದಲಿಸಿದ ಜಂತರ್ ಮಂತರ್ ಎಂಬ ಅಂತಃಸಾಕ್ಷಿ


**ದೆಹಲಿಯ ಬರಹಗಾರ್ತಿ ರೇಣುಕಾ ನಿಡಗುಂದಿ ಅವರ ಈ ಲೇಖನ ಪ್ರಜಾವಾಣಿಯ ಮುಕ್ತಛಂಧದಲ್ಲಿ (30 ಸೆಪ್ಟಂಬರ್ 2018) ಪ್ರಕಟವಾಗಿದೆ. ಅಭಿಮತದಲ್ಲಿ ಪ್ರಕಟಣೆಗೆ ಒಪ್ಪಿಕೊಂಡ ಲೇಖಕಿಗೆ ಆಭಾರಿ.**

ಪಾರ್ಲಿಮೆಂಟಿನ ಕಲ್ಲಿನ ಗೋಡೆಗಳನ್ನು ಬಡಿಬಡಿದು ಎಚ್ಚರಿಸುತ್ತಿದ್ದ ದನಿಗಳು ಚದುರಿಹೋಗಿದ್ದವು. ಹಾಗೆಂದು ದೇಶದ ಬಾಯಿಯನ್ನು ಹೊಲಿಯಲಾರರು ಯಾರೂ. ಎರಡೂವರೆ ದಶಕಗಳಿಂದಲೂ ಜಂತರ್ ಮಂತರ್ ಎಲ್ಲ ಆಂದೋಲನಗಳ ಶಕ್ತಿಕೇಂದ್ರ. ದೇಶದ ಜನತೆಯ ಹೃದಯ ಮಿಡಿತ. ಅಡಗಿಸಲೆತ್ನಿಸಿದಷ್ಟೂ ಅಂತಃಸಾಕ್ಷಿ ಮತ್ತೆ ಮತ್ತೆ ದನಿಯೆತ್ತುತ್ತಲೇ ಇರುತ್ತದೆ.

ಕಳೆದ ಅಕ್ಟೋಬರ್‌ನಲ್ಲಿ ರಾಷ್ಟ್ರೀಯ ಹಸಿರು ಪೀಠ ದೆಹಲಿಯ ಆಂದೋಲನ ಸ್ಥಳವಾದ ಜಂತರ್ ಮಂತರ್‌ನಲ್ಲಿ ಪ್ರತಿಭಟನೆಗಳನ್ನು ನಡೆಸದಂತೆ ನಿಷೇಧ ಹೇರಿದ್ದನ್ನು ಕಂಡು ಇಡೀ ದೇಶವೇ ಬೆಚ್ಚಿಬಿದ್ದಿತು. ಹಸಿರು ಪೀಠ ತನ್ನ ಅದೇಶವನ್ನು ಹಿಂಪಡೆಯಲಿಲ್ಲ. ಆದರೆ, ನಿರಾಸೆಯೆಲ್ಲವೂ ಆವಿಯಾದಂತೆ ನೆಮ್ಮದಿಯ ಗಾಳಿ ಬೀಸಿತು. ಜಂತರ್ ಮಂತರ್ ಮತ್ತು ಬೋಟ್ ಕ್ಲಬ್ ಪ್ರದೇಶಗಳಲ್ಲಿ ಧರಣಿ, ಪ್ರತಿಭಟನೆ, ಸಾರ್ವಜನಿಕ ಆಂದೋಲನಗಳ ವಿರುದ್ಧ ಹೇರಿದ್ದ ಸಂಪೂರ್ಣ ನಿಷೇಧವನ್ನು ಸುಪ್ರೀಂ ಕೋರ್ಟ್ ಜುಲೈ 23 ರಂದು ತೆರವುಗೊಳಿಸಿತು.

ಒಂದು ಮರಕ್ಕೆ ಕಲ್ಲೆಸೆದರೂ ಪಾರ್ಲಿಮೆಂಟಿಗೆ ಕೇಳಿಸುವಷ್ಟು ಹತ್ತಿರವಿದ್ದುದೇ ಇಲ್ಲಿ ನಡೆಯುವ ಧರಣಿ, ಸತ್ಯಾಗ್ರಹಗಳನ್ನು ಅರ್ಥಪೂರ್ಣವಾಗಿಸಿತ್ತು. ಚಳವಳಿಗಾರರ ಕನಸುಗಳನ್ನು ಜೀವಂತವಾಗಿಟ್ಟಿತು. ದೆಹಲಿಯ ರಣಗುಡುವ ಬಿಸಿಲು, ನೆತ್ತಿ ಕಾದು ಕಣ್ಣು ಕತ್ತಲಿಡುವ ದಾಹ, ಬೆಂಕಿಯುಗುಳುವ ರಸ್ತೆಗಳು, ದಳದಳ ಹರಿವ ಬೆವರು, ಬೇಸಿಗೆಯ ಉರಿವ ಸೂರ್ಯನನ್ನು ಲೆಕ್ಕಿಸದೇ ದೇಶದ ನಾನಾ ಭಾಗದ ಜನರು ಇಲ್ಲಿ ಬಂದು ಉಪವಾಸ ಸತ್ಯಾಗ್ರಹ, ಧರಣಿ ನಡೆಸುತ್ತಿದ್ದರು. ತಮ್ಮ ಅಳಲು ಸರಕಾರಕ್ಕೆ ತಲುಪುತ್ತದೆ ಒಂದು ದಿನ ಎಂಬ ಕನಸನ್ನು ದಿನವೂ ಕಾಣುತ್ತಿದ್ದರು. ಇಲ್ಲಿಯೇ ಒನ್ ರ್ಯಾಂಕ್, ಒನ್ ಪೋಸ್ಟ್ ಎಂಬ ಬೇಡಿಕೆ ಮುಂದಿಟ್ಟುಕೊಂಡು ಮೇಜರ್ ಜನರಲ್ ಸತ್‌ಬೀರ್ ಸಿಂಗರ ಮುಂದಾಳತ್ವದಲ್ಲಿ ಕಳೆದ ಹನ್ನೆರಡು ವರ್ಷಗಳಿಂದಲೂ ನಮ್ಮ ದೇಶದ ನಿವೃತ್ತ ಯೋಧರು ಆಂದೋಲನ ನಡೆಸುತ್ತಿದ್ದರು. ಅಕ್ಟೋಬರಿನ ಒಂದು ಮುಂಜಾವು ಪೋಲಿಸ ಪಡೆ ನುಗ್ಗಿ ಬಂದು ತಮ್ಮ ಶಕ್ತಿಪ್ರದರ್ಶನ, ಅಧಿಕಾರ ಬಲದಿಂದ ಈ ಎಲ್ಲ ಹೋರಾಟಗಾರರನ್ನು ಸ್ಥಳದಿಂದ ಓಡಿಸಿದ್ದನ್ನು ಓದಿ ಪ್ರಜಾಪ್ರಭುತ್ವದ ಕೊಲೆಯಾಯಿತು ಎಂದು ಕಣ್ಣೀರು ಹಾಕಿದವರೆಷ್ಟೋ!

ಅವತ್ತು ಗೌರಕ್ಕನ ಹತ್ಯೆಯ ನಂತರ ದೆಹಲಿಯ ಜಂತರ್ ಮಂತರಿನಲ್ಲಿ ನಡೆದ ಪ್ರತಿಭಟನಾ ಸ್ಥಳದಲ್ಲಿ ನಿಂತು ಕೇಳಿದ ಹತ್ಯಾ ವಿರೋಧಿ ಭಾಷಣಗಳು, ನ್ಯಾಯಬೇಡಿಕೆಯ ಮನವಿಗಳು, ಆಕ್ರೋಶದ ಕೂಗುಗಳು ಇನ್ನೂ ಕಿವಿಯಲ್ಲಿ ಅನುರಣಿಸುತ್ತಲೇ ಇವೆ. ಕರ್ನಾಟಕದಿಂದ ಆಗಮಿಸಿದ ಹೋರಾಟಗಾರರೂ ಅಲ್ಲಿದ್ದರು. ರಾಜಕಾರಣಿಗಳು, ಸಾಮಾಜಿಕ ಸಂಘ ಸಂಸ್ಥೆಗಳ ಕಾರ್ಯಕರ್ತರು, ವಿದ್ಯಾರ್ಥಿ ಸಂಘಟನೆಗಳು, ದೇಶದ ನಾನಾ ಕಡೆಯಿಂದ ಬಂದ ಹೋರಾಟಗಾರರು ಅಲ್ಲಿ ಸೇರಿದ್ದರು. ಹೋರಾಟಗಾರ್ತಿ ಕೆ. ನೀಲಾ ಮತ್ತು ಸಂಗಾತಿಗಳೊಡನೆ ಫುಟ್‌ಪಾತಿನ ಮೇಲೆ ಕೂತು ಚಹ ಕುಡಿಯುತ್ತ ಚಳವಳಿಗಾರರ ಮಾತುಗಳನ್ನು ಆಲಿಸುತ್ತಿದ್ದೆವು. ಅಭಿವ್ಯಕ್ತಿ ಸ್ವಾತಂತ್ರ್ಯ, ವೈಚಾರಿಕತೆಗಳ ಮೇಲೆ ನಡೆಯುತ್ತಿರುವ ದಾಳಿಗಳು, ಪ್ರಶ್ನೆ ಮಾಡುವುದೇ ರಾಷ್ಟ್ರದ್ರೋಹ ಎಂದು ಬಿಂಬಿಸುವುದು ಫ್ಯಾಸಿಸಂ ವಾತಾವರಣವನ್ನು ಸೃಷ್ಟಿಸಿವೆ. ಅಧಿಕಾರಸೂತ್ರವನ್ನು ಹಿಡಿದ ಕೆಲವರ ಬಾಯಿಂದ "ಅವರ ತಲೆ ಕಡಿಯುತ್ತೇವೆ, ಇವರ ಕೈ ಕಡಿಯುತ್ತೇವೆ, ದೇಶದಿಂದ ಹೊರಗಟ್ಟುತ್ತೇವೆ" ಎನ್ನುವ ಅಸಂಬದ್ಧ ಹೇಳಿಕೆಗಳು, ಸುಪಾರಿಗಳು, ಯಾರನ್ನು ಬೇಕಾದರೂ ಕೊಂದರೂ



ನ್ಯಾಯಾಂಗ, ಶಾಸಕಾಂಗಗಳೇನೂ ಮಾಡಲಾರವೆಂಬ ಆಘಾತಕರ ಆತಂಕದ ಸಮಯದಲ್ಲಿ ಚಳವಳಿಗಳೇ ನಮ್ಮನ್ನು ಬದುಕಿಸಬೇಕಿವೆ.

ಜಂತರ ಮಂತರ್ ಎಂಬುದು ಬರಿ ಗೋಡೆ, ಕಂಪೌಂಡುಗಳ, ಫುಟ್‌ಪಾತು, ಗಿಡ ಮರಗಳ ನೆರಳಿರುವ ಮತ್ತು ನಾಲ್ಕಾರು ರಸ್ತೆಗಳು ಸೇರುವ ಚೌಕವೂ ಅಲ್ಲ, ಓಣಿಯೂ ಅಲ್ಲ. ಸಾವಿರ ಮಾತುಗಳನ್ನು, ಎದೆಯ ನೋವುಗಳ ಒಟ್ಟು ಬಣ್ಣಗಳನ್ನು ಒಣಗಿಸಿಟ್ಟುಕೊಂಡ ಬ್ಯಾನರುಗಳಲ್ಲ; ಅಂಗಿಯ ಮೇಲೊಂದು ಸಂಖ್ಯೆ ಹೊತ್ತ ಕೈದಿಯೂ ಅಲ್ಲ. ಜಂತರ್ ಮಂತರ್ ದೇಶದ ಜೀವಧಾತು, ಉಸಿರಾಡುವ ಜೀವಂತ ಮನುಷ್ಯಲೋಕ.

ರಾಷ್ಟ್ರದ ರಾಜಧಾನಿ ದೆಹಲಿಯ ಹೃದಯ ಭಾಗದಲ್ಲಿ ಶಬ್ದ ಮಾಲಿನ್ಯಕ್ಕೆ ಕಾರಣವಾಗಿರುವ ಐತಿಹಾಸಿಕ ಜಂತರ್ ಮಂತರ್ ರಸ್ತೆಯಲ್ಲಿ ನಡೆಯುವ ಎಲ್ಲಾ ಬಗೆಯ ಧರಣಿ, ಪ್ರತಿಭಟನೆಗಳನ್ನು ತಕ್ಷಣದಿಂದ ನಿಲ್ಲಿಸಬೇಕು ಎಂದು ರಾಷ್ಟ್ರೀಯ ಹಸಿರು ನ್ಯಾಯಮಂಡಳಿ(ಎನ್‌ಜಿಟಿ) ಕಳೆದ ಅಕ್ಟೋಬರ್ ತಿಂಗಳಲ್ಲಿ ದೆಹಲಿ ಸರ್ಕಾರಕ್ಕೆ ಆದೇಶಿಸಿತ್ತು.

ಈ ಪ್ರದೇಶದಲ್ಲಿ ನಡೆಯುತ್ತಿರುವ ಎಲ್ಲ ಪ್ರತಿಭಟನೆಗಳಿಂದಾಗಿ ಶಬ್ದ ಮಾಲಿನ್ಯ ಮತ್ತು ವಾಯು ಮಾಲಿನ್ಯ ಸೇರಿದಂತೆ ಪರಿಸರ ಸಂರಕ್ಷಣೆಯ ಕಾನೂನುಗಳ ಸಾರಾ ಸಗಟು ಉಲ್ಲಂಘನೆಯಾಗಿದೆ ಎಂದು ಹಸಿರು ಪೀಠ ಹೇಳಿದೆ. ಜಂತರ್ ಮಂತರ್ ರಸ್ತೆಯ ಉದ್ದಕ್ಕೂ ಕಂಡು ಬರುವ ಎಲ್ಲ ತಾತ್ಕಾಲಿಕ ರಚನೆಗಳನ್ನು, ಲೌಡ್ ಸ್ಪೀಕರ್‌ಗಳನ್ನು ಈ ಕೂಡಲೇ ತೆರವುಗೊಳಿಸಬೇಕು ಎಂದು ನ್ಯಾಯಮೂರ್ತಿ ಆರ್ ಎಸ್ ರಾಠೋಡ್ ನೇತೃತ್ವದ ಹಸಿರು ಹಸಿರು ಪೀಠ ದೆಹಲಿ ಮುನಿಸಿಪಲ್ ಕೌನ್ಸಿಲ್ (ಎನ್‌ಎಂಡಿಸಿ)ಗೆ ಸೂಚಿಸಿತು.

ದೇಶ ಅಂದರೆ ಬರಿ ಮಣ್ಣಲ್ಲ, ಉಸಿರಾಡುವ ಮನುಷ್ಯರು ಎಂದು ತೆಲುಗು ಕವಿ ಗುರುಜಾಡ ಅಪ್ಪಾರಾವ್ ಹೇಳಿದ್ದರು ಅಲ್ಲವೇ? ಹಾಗೆ ಈ ದೇಶದ ನಾನಾ ಕಡೆಗಳಿಂದ ಜನ ದೆಹಲಿಗೆ ಬಂದು ಆಳುವ ಸರಕಾರದೆದುರು ತಮ್ಮ ಅಸಹನೆ, ದೂರು, ಬೇಡಿಕೆಗಳನ್ನು ಸಲ್ಲಿಸದಿದ್ದರೆ, "ನ್ಯಾಯದ ಗಂಟೆ" ಬಾರಿಸದಿದ್ದರೆ ಮತ್ತೆಲ್ಲಿ ಹೇಳಿಕೊಳ್ಳಬೇಕು? ಮತ್ತು ಅಂಥ ಅವಕಾಶವನ್ನು ನಮ್ಮ ಸಂವಿಧಾನ ನಮಗೆ ಒದಗಿಸಿದೆ. ಪ್ರಜಾತಂತ್ರದಲ್ಲಿ ಪ್ರತಿಯೊಬ್ಬ ನಾಗರಿಕನಿಗೂ ಮಾತಾಡುವ, ತನ್ನ ಅಭಿಪ್ರಾಯಗಳನ್ನು ವ್ಯಕ್ತಮಾಡುವ, ತನ್ನ ಆಹಾರವನ್ನು ಆಯ್ದುಕೊಳ್ಳುವ, ಸ್ವತಂತ್ರ ಭಾರತದಲ್ಲಿ ನೆಮ್ಮದಿಯಾಗಿ ಬದುಕುವ ಎಲ್ಲ ಹಕ್ಕುಗಳನ್ನು ನಮ್ಮ ಸಂವಿಧಾನ ನಮಗೆ ನೀಡಿದೆ. ಅದಕ್ಕೆ ಈ ದೇಶದ ಪ್ರತಿಯೊಬ್ಬನೂ ಹಕ್ಕುದಾರನು. ಕಾಡು ಮೇಡಿನಲ್ಲಿ ಬದುಕುವ ಪ್ರಾಣಿ ಪಕ್ಷಿ ಸಂಕುಲವೂ ತಮ್ಮ ಸಾತಂತ್ರ್ಯಕ್ಕೆ ಧಕ್ಕೆಬಾರದಂತೆ ಶಿಸ್ತುಬದ್ಧವಾಗಿಯೇ ಬದುಕುತ್ತವೆ.

2007 ರಿಂದ ಮಚಿಂದರ್ ನಾಥ ಎಂಬುವರು ಜೂತಾ ಮಾರೋ ರಾಷ್ಟೀಯ ಆಂದೋಲನವನ್ನು ನಡೆಸಿದ್ದಾರೆ. ಅವರ ಹೋರಾಟ ಒಂದು ಸೀಮಿತ ಉದ್ದೇಶಕ್ಕಾಗಿರದೇ, ಭೂ ಸಮಸ್ಯೆಯಿಂದ ಸರಕಾರಿ ಉದ್ಯೋಗದವರೆಗೆ, ಖಾಸಗಿ ಉದ್ಯೋಗದಿಂದ ಬಗೆಹರಿಯದ ಕಗ್ಗೊಲೆ, ಹತ್ಯೆಗಳಂಥ ಕೇಸುಗಳವರೆಗೂ ವಿಸ್ತರಿಸಿತ್ತು. ನೋಡಿ ಹತ್ತು ವರ್ಷದ ಹಿಂದೆ "ಭ್ರಷ್ಟಾಚಾರಕ್ಕೆ, ಭ್ರಷ್ಟರಿಗೆ ಜೂತಾಮಾರೋ" ಎನ್ನಬಹುದಾಗಿದ್ದ ಅಭಿವ್ಯಕ್ತಿ ಸ್ವಾತಂತ್ರ್ಯ ಇವತ್ತಿಲ್ಲ! ಮಧುಸೂದನ್ ಬಿಶ್ವಾಸ್ ಎಂಬ ಯುವಕ ದೂರದ ಕೋಲ್ಕತ್ತಾದಿಂದ ಬಂದು ಇಲ್ಲಿ ಭೂಮಿಯ ಬಹುಭಾಗವನ್ನು ಆಕ್ರಮಿಸಿ ಮನುಕುಲಕ್ಕೆ ಮಾರಕವಾಗುತ್ತಿರುವ ಪ್ಲಾಸ್ಟಿಕ್, ಥರ್ಮೊಕೋಲ್ ಇವುಗಳನ್ನು ನಿಷೇಧಿಸಲು ಕೋರಿ ಆಂದೋಲನ ನಡೆಸುತ್ತಿದ್ದಾನೆ.

ನಿರ್ಭಯಾಳಿಗೆ ಎದುರಾದ ಪರಿಸ್ಥಿತಿ ಖಂಡಿಸಿ ನಡೆಸಿದ ಪ್ರತಿಭಟನೆಯಿರಬಹುದು, ಮಹಾದಾಯಿ ವಿವಾದ, ರೈತರ ಎಲ್ಲ ರೀತಿಯ ಸಾಲ ಮನ್ನಾ ಮಾಡಬೇಕು, ಎಲ್ಲ ಬೆಳೆಗಳಿಗೂ ವೈಜ್ಞಾನಿಕ ಬೆಲೆ ನಿಗದಿಪಡಿಸಬೇಕು ಎಂದು ಆಗ್ರಹಿಸಿ ರಾಜ್ಯ ರೈತ ಸಂಘದ ಸದಸ್ಯರು ನಡೆಸಿದ ಪ್ರತಿಭಟನೆ. ಇತ್ತೀಚೆಗೆ ತಮಿಳುನಾಡಿನ ರೈತರು ತಮ್ಮ ಮೂತ್ರ ಕುಡಿದು ತೋರಿದ ಉಗ್ರ ಪ್ರತಿಭಟನೆ, ಕೆಟ್ಟ ಕನಸು ಕಂಡು ಬೆಚ್ಚಿದಂತೆ ಇಡೀ ದೇಶವನ್ನೇ ಬೆಚ್ಚಿಬೀಳಿಸಿದ ಜನಸಾಮಾನ್ಯರನ್ನು ಗೋಳಾಡಿಸಿದ 'ನೋಟು ಅಮಾನ್ಯಿಕರಣ' ವನ್ನು ವಿರೋಧಿಸಿ ನಡೆದ ಪ್ರತಿಭಟನೆ... ಇವೆಲ್ಲವನ್ನೂ ಜಂತರ್ ಮಂತರ್‌ನಲ್ಲಿ ನಡೆದ ಕೆಲವು ಪ್ರಮುಖ ಘಟನೆಗಳು ಎಂದು ಉಲ್ಲೇಖಿಸಬಹುದು.

ನಮ್ಮವರೇ ಆದ ಬೇಜವಾಡ ವಿಲ್ಸನ್ ಅವರು ಮೂರು ದಶಕಗಳಿಂದಲೂ ನಡೆಸುತ್ತಿರುವ 'ಸಫಾಯಿ ಕರ್ಮಚಾರಿ ಆಂದೋಲನ' ಇಂದು ದೇಶಾದ್ಯಂತ ಪ್ರಬಲ ಆಂದೋಲನವಾಗಿ ರೂಪುಗೊಂಡಿದೆ. ಮಲಹೊರುವ ಪದ್ಧತಿ ನಿಷೇಧ ಕಾನೂನು ಜಾರಿಯಲ್ಲಿದ್ದರೂ ನಾವಿಂದು 'ಸ್ವಚ್ಛ ಭಾರತ್' ಎಂದು ಮೆರೆಯುತ್ತಿರುವ ಹೊತ್ತಿನಲ್ಲಿ ಭಾರತದಲ್ಲಿ ಇನ್ನೂ ಮಲಹೊರುವ ಪದ್ಧತಿ ಜೀವಂತವಾಗಿದೆ. ಮಲ ಹೊರುವವರ ಬದುಕನ್ನು ಬದಲಿಸಲು ಆಗಿಲ್ಲ.

ಇದೇ ಜಂತರ್ ಮಂತರಿನಲ್ಲಿ ಆಂದೋಲನಕಾರರು ಮಲದ ಬುಟ್ಟಿಗಳನ್ನು ಸುಟ್ಟು ತಮ್ಮ ಆಂದೋಲನವನ್ನು ನಡೆಸಿದ್ದರು.

1988ರಲ್ಲಿ ಮಹಿಂದರ್ ಸಿಂಗ್ ಟಿಕಾಯತ್ ಎಂಬ ಜಾಟ್ ರೈತ ಮುಖಂಡ ಸಾವಿರಾರು ಜನ ರೈತರೊಂದಿಗೆ (ಐದು ಲಕ್ಷ!!) ದೆಹಲಿಯ ಬೋಟ್ ಕ್ಲಬ್ ಪ್ರತಿಭಟನಾ ಸ್ಥಳದಲ್ಲಿ ಧರಣಿ ಕುಳಿತಾಗ ಸುತ್ತಲಿನ ಪಾರ್ಲಿಮೆಂಟಿನ ಪ್ರದೇಶ ರಾಷ್ಟ್ರಪತಿಭವನದಿಂದ ಹಿಡಿದು ಪ್ರಧಾನ ಮಂತ್ರಿಯವರ ನಿವಾಸದವರೆಗಿನ ಜಾಗವನ್ನು ಮಲಿನಗೊಳಿಸಿದ್ದರಂತೆ. ಧರಣಿಯ ಜನ ಅಲ್ಲಿಯೇ ಅಡುಗೆ ಮಾಡಿಕೊಳ್ಳುವುದರಿಂದ ಹಿಡಿದು ತಮ್ಮ ಸ್ನಾನ, ಶೌಚ ಇತ್ಯಾದಿಗಳಿಂದ ಆಯಕಟ್ಟಿನ ಜಾಗವನ್ನೆಲ್ಲ ಆಕ್ರಮಿಸಿ ಗಲೀಜುಗೊಳಿಸಿದ್ದರು. ಅದನ್ನು ತಪ್ಪಿಸುವುದಕ್ಕಾಗಿಯೇ ಮುಂದೆ 1993 ರಲ್ಲಿ ಬೋಟ್ ಕ್ಲಬ್ಬಿನಿಂದ ಜಂತರ್ ಮಂತರ್‌ಗೆ ಪ್ರತಿಭಟನಾ ಸ್ಥಳವನ್ನು ವರ್ಗಾಯಿಸಲಾಯಿತು.

ಈ ಚಳವಳಿಗಾರರ ಮನೆಯೆಂದರೆ ಈ ಜಂತರ್ ಮಂತರ್‌ನ ಫುಟ್‌ಪಾತ್. ಅಲ್ಲಿಯೇ ಚಾಯ್‌ವಾಲಾಗಳು, ಭೋಲೇ ಕುಲ್ಚೆ ಮಾರುವವರು, ತಿಂಡಿ ತಿನಿಸಿನ ಗೂಡಂಗಡಿಗಳು, ಚಳವಳಿಗಾರರ ಟೆಂಟುಗಳು, ಊಟ ತಿಂಡಿ, ಸ್ನಾನ ಎಲ್ಲವೂ ಇಲ್ಲಿಯೇ. ಮೇಲೆ ಖುಲಾ ಆಕಾಶ. ಮಲಗಲು ಭೂತಾಯಿಯ ಸೆರಗು, ಕಂಡು ಮಾತಾಡಿಸಿದವರೇ ಬಂಧುಗಳು, ಬದುಕಿನ ಉದ್ದೇಶ ನಿಸ್ವಾರ್ಥ ಸೇವೆ, ಸಮಾಜಪರ ಹೋರಾಟ. ಸಮಾಜದ ಒಳಿತಿಗಾಗಿ ಎಲ್ಲವನ್ನೂ ಬದಿಗಿಟ್ಟು ಟೊಂಕಕಟ್ಟಿ ನಿಂತ ಜೀವಗಳಿಗೆ ಸುಪ್ರೀಂ ಕೋರ್ಟ್ ಆದೇಶ ಬತ್ತಿಹೋದ ಕಣ್ಣುಗಳಲ್ಲಿ ಮತ್ತೆ ಭರವಸೆಯ ಕಿರಣ ಮೂಡಿಸಿದೆ.

ಪ್ರಜಾತಂತ್ರದ ಈ ಚರಿತ್ರೆ ಬ್ರಿಟಿಷರ ಕಾಲದಿಂದಲೂ ತನ್ನ ಪರಂಪರೆಯನ್ನು ಉಳಿಸಿಕೊಂಡು ಬಂದಿದೆ. 1911 ರಲ್ಲಿ ದೆಹಲಿ ಮುಕುಟಕ್ಕೆ ರಾಷ್ಟ್ರದ ರಾಜಧಾನಿಯ ಗರಿಮೂಡಿದಾಗ ಚಾಂದನಿಚೌಕಿನ ಟೌನ್ ಹಾಲ್ ಎದುರು ನಾಗರಿಕರು ತಮ್ಮ ಪ್ರತಿಭಟನೆಯ ಪ್ರದರ್ಶನವನ್ನು ಮಾಡುತ್ತಿದ್ದರಂತೆ. ಮುಂದೆ 1950ರಲ್ಲಿ ದೆಹಲಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಇದೇ ಟೌನ್ ಹಾಲಿನೆದುರು "ಪೋರ್ಚುಗೀಸರೇ ಗೋವೆಯನ್ನು ಬಿಟ್ಟು ತೊಲಗಿ" ಎಂಬ ಉದ್ಘೋಷಣೆಗಳನ್ನು ಕೂಗಿ ಆಂದೋಲನ ನಡೆಸಿದ್ದರೆಂಬ ಇತಿಹಾಸವಿದೆ.

ಇದ್ದಕ್ಕಿದ್ದಂತೆ ಜಂತರ್ ಮಂತರ್ ಪ್ರದೇಶವನ್ನು ತೆರವುಗೊಳಿಸಿ ರಾಮಲೀಲಾ ಮೈದಾನಕ್ಕೆ ತಳ್ಳಿದ್ದರಲ್ಲೂ ಬೆನ್ನುಹಾಕಿ ನಡೆಯುವ ನಡೆಯೇ ಇದೆ. ರಾಮಲೀಲಾ ಮೈದಾನ್ ಇರುವುದು ದೆಹಲಿಯ ಹೃದಯಭಾಗದಿಂದ ದೂರ ಪಾದದ ಕಡೆಗೆ. ಪಾರ್ಲಿಮೆಂಟಿನ ಹತ್ತಿರವೇ ಇರುವ ಜಂತರ್ ಮಂತರಿನ ಗೋಡೆಗಳಿಂದ, ಹಕ್ಕಿಗೂಡುಗಳಿಂದ ಹೊರಡುವ ದನಿಗಳು ಆಳುವ ಪ್ರಭುತ್ವಕ್ಕೆ ಬೇಡ. ಇದ್ದಕ್ಕಿದ್ದಂತೆ ರಾಷ್ಟ್ರೀಯ ಹಸಿರು ಪೀಠಕ್ಕೆ ಪರಿಸರ ಕಾನೂನು ಉಲ್ಲಂಘನೆಯಾಗುತ್ತಿದೆಯೆಂದು ಎಲ್ಲಾದರೂ ಚಳವಳಿ ಮಾಡಲಿ ಅಂತ ರಾಮಲೀಲಾ ಮೈದಾನದ ಸಂಚುಹೂಡಿದ್ದಾರೆನ್ನುತ್ತಾರೆ ಅಲ್ಲಿ ದಶಕಗಳಿಂದ ಆಂದೋಲನ ನಡೆಸುತ್ತಿರುವ ಚಳವಳಿಗಾರರು. ಮುಂದೆ ಹೋರಾಟಗಾರರ ಕೈಕಾಲುಗಳಿಗೆ ಕೋಳವನ್ನು ತೊಡಿಸುವ ಕಾಲವೂ ಬರಬಹುದು. ವಾಸ್ತವದಲ್ಲಿ ರಾಮಲೀಲಾ ಮೈದಾನದಲ್ಲಿ ಊಟ, ತಿಂಡಿ, ಶೌಚ, ನೀರಿನ ಯಾವ ವ್ಯವಸ್ಥೆಯೂ ಇಲ್ಲ. ಕುಳಿತುಕೊಳ್ಳಲು ಮರದ ನೆರಳೂ ಇಲ್ಲ. ಮತ್ತು ದಿನವೊಂದಕ್ಕೆ 50,000 ರೂಪಾಯಿಗಳ ಬಾಡಿಗೆ. ಅದನ್ನೆಲ್ಲಿಂದ ಹೊಂದಿಸಬೇಕು ನಮ್ಮ ಬರಿಗೈ ಚಳವಳಿಗಾರ? ಇತ್ತ ಜಂತರ್ ಮಂತರಿನ ನಿವಾಸಿಗಳು ಶಬ್ದಮಾಲಿನ್ಯದಿಂದ ಬದುಕಿನ ನೆಮ್ಮದಿಯೆ ಇಲ್ಲವಾಗಿದೆ. ತಮಗೂ ನೆಮ್ಮದಿಯಿಂದ ಬದುಕುವ ಹಕ್ಕಿದೆ ಎಂದು ವಾದಿಸುತ್ತಾರೆ.

ರಾಷ್ಟ್ರೀಯ ಹಸಿರು ಪೀಠದ ನಿಷೇಧವನ್ನು ಪ್ರಶ್ನಿಸಿ ಮಜ್ದೂರ್ ಕಿಸಾನ್ ಶಕ್ತಿ ಸಂಘಟನೆಯು ಸಲ್ಲಿಸಿದ ಅರ್ಜಿಯನ್ನು ವಿಚಾರಣೆ ನಡೆಸಿದ ನ್ಯಾಯಾಲಯ ಸಾರ್ವಜನಿಕರು ಸೇರುವ ಇಂಥ ತಾಣಗಳಲ್ಲಿ ಪ್ರತಿಭಟನೆ ಮತ್ತು ಧರಣಿಗಳಿಗೆ ಸಂಪೂರ್ಣ ನಿಷೇಧ ಹೇರುವಂತಿಲ್ಲ ಎಂದು ಹೇಳಿದೆ. ಅ

***ರೇಣುಕಾ ನಿಡಗುಂದಿ***

# ಸತ್ಕಾರ್ಯಕ್ಕೆ ಪ್ರೇರಣೆ ನೀಡುವ 'ಕಣ್ಣು'

ಜ್ಞಾನ ಮತ್ತು ಬೆಳಕು ಬೇರೆಯಲ್ಲ. ಈ ಎರಡೂ ಲಭ್ಯವಾಗುವುದು ಕಣ್ಣಿನ ಮೂಲಕ. ಸ್ಪರ್ಶದಿಂದ ಒದಗುವ ಜ್ಞಾನಕ್ಕೆ ಮಿತಿಯಿದೆ. ಅದೇ ನೋಟದಿಂದ ಪಡೆಯುವ ಜ್ಞಾನ ಅಪರಿಮಿತ. ಅದು ಕಣ್ಣಿನಿಂದ ಮಾತ್ರ ಸಾಧ್ಯ. ಪಂಚೇಂದ್ರಿಯಗಳಲ್ಲಿ ಮುಖ್ಯವಾದ ಕಣ್ಣಿನ ಮಹತ್ವ ಅರಿವಾಗುವುದು ದೃಷ್ಟಿ ಇದ್ದವರು ಅದನ್ನು ಕಳೆದುಕೊಂಡಾಗ ಮಾತ್ರ. ಇದ್ದಾಗ ಅದರ ಮಹತ್ವವೇ ತಿಳಿಯುವುದಿಲ್ಲ. ಇದು ಬೆಲೆಕಟ್ಟಲಾಗದ ಎಲ್ಲಾ ಸಂಗತಿಗಳಿಗೂ ಅನ್ವಯ. ಕಣ್ಣಿನ ಮಹತ್ವ ಮತ್ತು ಅದರ ಸದುಪಯೋಗಕ್ಕೆ ಪ್ರೇರಣೆ ನೀಡುವ ವಿಶಿಷ್ಟ ನಾಟಕ 'ಕಣ್ಣು'.

ತೆಲುಗು ನಾಟಕಕಾರ ಗೊಲ್ಲಪುಡಿ ಮಾರುತಿ ರಾವ್ ಅವರ ಈ ನಾಟಕವನ್ನು ಈಚೆಗೆ ದೆಹಲಿಯ ರಂಗಾಸಕ್ತರ ಮುಂದೆ ತಂದು ವಿಶೇಷ ಅನುಭವ ನೀಡಿದವರು ನಿರ್ದೇಶಕ ಶಿವಾನಂದ ಇಂಗಳೇಶ್ವರ. ಈ ನಾಟಕವನ್ನು ಕನ್ನಡಕ್ಕೆ ತಂದ ಹರಿಪ್ರಿಯ ಎಸ್. ಮತ್ತು ಅನ್ವರ್ ಭಾಷಾ ಅವರ ಕೆಲಸ ಶ್ಲಾಘನೀಯ.

ಒಂದೆಡೆ ಕಣ್ಣಿಲ್ಲದ ಕುರುಡರ ಲೋಕವನ್ನು ಮನೋಜ್ಞವಾಗಿ ಪರಿಚಯಿಸುತ್ತಾ ಸಾಗುವ ಈ ನಾಟಕ ಅವರ ದೈನಂದಿನ ಜೀವನದಲ್ಲಿ ಬಂದುಹೋಗುವ ಕಣ್ಣಿರುವ ಜನರ ಸ್ವಾರ್ಥವನ್ನು ಬಯಲಿಗೆಳೆಯುತ್ತದೆ. ಕುರುಡರ ಮುಗ್ಧತೆ, ಅಮಾಯಕತೆ, ಅವರ ಕಲ್ಪನಾ ಜಗತ್ತಿನ ನೋವು–ನಲಿವುಗಳನ್ನು ಹೃದಯಸ್ಪರ್ಶಿಯಾಗಿ ತೆರೆದಿಡುತ್ತದೆ. ಇಲ್ಲಿ ಬಂದು ಹೋಗುವ ಕಣ್ಣಿರುವ ಜನರ ಅಮಾನವೀಯತೆ, ವ್ಯಂಗ್ಯಗಳನ್ನು ಸೂಕ್ಷ್ಮವಾಗಿ ನೋಡುಗರಿಗೆ ನೀಡುತ್ತದೆ.

ಊರಿನ ಹೊರ ವಲಯದಲ್ಲಿ ಐದು ಜನ ಕುರುಡರು ವಾಸಿಸುತ್ತಿದ್ದಾರೆ. ಪಕ್ಕದಲ್ಲಿ ಹಳೆಯ ದೇವಾಲಯ. ಭಿಕ್ಷೆ ಮತ್ತು ಸಣ್ಣಪುಟ್ಟ ಕೆಲಸಗಳಿಂದ ಪುಡಿಗಾಸು ಇವರ ಸಂಪಾದನೆ. ಇವರ ಹಸಿವು ತಣಿಸಲು ರೊಟ್ಟಿ ಒದಗಿಸುವ ಶೆಟ್ಟಿ, ದೇವಾಲಯದ ಅರ್ಚಕ ಮೊದಲಾದವರು ಇಲ್ಲಿ ಲಾಭ ಪಡೆಯಲು ಯತ್ನಿಸುವ ದುಷ್ಟಕೂಟ. ಹೀಗೆ ಸಾಗುವ ನಾಟಕ ತಿರುವು ಪಡೆಯುವುದು ಆ ಕುರುಡರಲ್ಲಿ ಒಬ್ಬನಿಗೆ ದೃಷ್ಟಿ ಬಂದಾಗ.

ಅರ್ಚಕನ ಸಲಹೆಯಂತೆ ಊರಿಗೆ ಬಂದ ವೈದ್ಯರ ಮೂಲಕ ಅವರಲ್ಲಿ ಒಬ್ಬನಿಗೆ ದೃಷ್ಟಿ ಕೊಡಿಸಲು ಕುರುಡರು ನಿರ್ಧರಿಸುತ್ತಾರೆ. ಅವರಲ್ಲಿ ಹಿರಿಯನಾದ ದೊಡ್ಡಯ್ಯನ (ಎ.ಟಿ. ಶ್ರೀನಿವಾಸ) ತಾಯ್ತನದ ಕರುಣಾಭಾವ, ಹಾಡು ಹೇಳುವ ಹೃದಯವಂತ ಕರೀಂ (ಎಸ್. ಕುಮಾರ್), ಇವರೆಲ್ಲರ ಹಿತ ಕಾಯುವ ರಾಜಿ (ಸಂಗಪ್ಪ ವಗ್ಗರ) ಮತ್ತು ಊಟ–ತಿಂಡಿ ನೀಡಿ ಪೊರೆವ ಅಂಧ ಹುಡುಗಿ ಸೀತಾ (ವಿದ್ಯಾ ಭಟ್) ಇವರೆಲ್ಲರೂ ದೃಷ್ಟಿ ಪಡೆಯಲು ಹಿಂಜರಿಯುತ್ತಾರೆ. ಆದರೆ ಈ ಕಣ್ಣಿಲ್ಲದ ಕತ್ತಲ ಬದುಕೇ ಪರಮಸುಖ, ಕಣ್ಣಿಗೆ ಕಾಣುವ ಲೋಕ ಭಯಾನಕ ಎಂದು ಭಾವಿಸಿದ್ದ ಅಂಧ ಯುವಕ ರಂಗನಿಗೆ ದೃಷ್ಟಿ ಕೊಡಿಸಲು ಅವನನ್ನು ಒಪ್ಪಿಸುತ್ತಾರೆ.

ದೃಷ್ಟಿ ಪಡೆದ ರಂಗ ಆರಂಭದಲ್ಲಿ ಸುತ್ತಲ ಜನರ ಮೋಸ, ಸುಲಿಗೆಗಳನ್ನು ಪ್ರತಿಭಟಿಸಿದರೂ ನಂತರ ಅದರ ಪಾಲುದಾರನಾಗುತ್ತಾನೆ. ಹಣ ಅಂತಸ್ತಿನ ಅಮಲು ನಂತರ ಹೆಣ್ಣಿನ ಮೋಹದತ್ತ ತಿರುಗುತ್ತದೆ. ಕೈ ತುತ್ತು ನೀಡಿದ ಅಂಧ ಹುಡುಗಿ ಮೇಲೆ ಎರಗಲು ಪ್ರಯತ್ನಿಸುತ್ತಾನೆ. ಒಲಿದರೆ ನಾರಿ, ಮುನಿದರೆ ಮಾರಿ ಎಂಬ ಮಾತಿನಂತೆ ಆಕೆಯ ಕೋಪ ರಂಗನ ಕಣ್ಣುಗಳಿಗೆ ಮತ್ತೆ ಶಾಪವೆಂಬಂತೆ ಒದಗುತ್ತದೆ. ಕಣ್ಣುಗಳನ್ನು ಕಳೆದುಕೊಂಡ ರಂಗ ಪರಿತಪಿಸುತ್ತಾನೆ. ಮರಳಿ ಪಡೆದ ಕಣ್ಣುಗಳ ಮೂಲಕ ರಂಗ ಅನಾಚಾರಗಳನ್ನು ಎಸಗಿರುತ್ತಾನೆ. ಸಿಕ್ಕಿದ ಅವಕಾಶವನ್ನು ಸತ್ಕಾರ್ಯಗಳಿಗೆ ಬಳಸಬೇಕು ಎಂಬುದು ಈ ನಾಟಕದ ಸಂದೇಶ.

ಕಣ್ಣಿಲ್ಲದ ಮತ್ತು ಕಣ್ಣು ಪಡೆಯುವ ವಿವಿಧ ಅವಸ್ಥೆಗಳಲ್ಲಿ ಹಿರಿಯ ಕಲಾವಿದ ಟಿ.ಎಂ. ಮೈಲಾರಪ್ಪ ಸ್ಮರಣೀಯ ಅಭಿನಯ ನೀಡಿದ್ದಾರೆ. ಕುರುಡರಾಗಿ ಎ.ಟಿ. ಶ್ರೀನಿವಾಸ, ವಿದ್ಯಾಭಟ್, ಕುಮಾರ್ ಎಸ್. ಮತ್ತು ಸಂಗಪ್ಪ ವಗ್ಗರ ಮನೋಜ್ಞವಾಗಿ ನಟಿಸಿದ್ದಾರೆ. ಶೆಟ್ಟಿಯಾಗಿ ನಾರಾಯಣ ಬಿ ಮತ್ತು ಇತರ ಪೋಷಕ ಪಾತ್ರಗಳಲ್ಲಿ ನಟಿಸಿದ ಶ್ರೀನಿವಾಸ ಕೆ.ಎಸ್., ಬಿ.ಕೆ. ಬಸವರಾಜು, ಡಾ. ಅಹಲ್ಯಾಚಿಂತಾಮಣಿ, ಜಿ.ಎಸ್. ಪ್ರದೀಪ್, ಅಮರೇಶ್ ಎಚ್.ಎಸ್., ರಾಘವೇಂದ್ರ ನಾಯಕ್ ಮತ್ತು ಬಸವಣ್ಣಿ ಬಿ. ಹುಂಡ್ರಿ ಅವರ ಪಾತ್ರಗಳು ಸಮಯೋಚಿತವಾಗಿ ಮೂಡಿ ಬಂದಿದೆ. ಶಶಿಕಾಂತ ಪಾಟೀಲ ಅವರ ಪ್ರಸಾದನ ಮತ್ತು ಸುಧೀರ್ ಫಡ್ನೀಸ್ ಅವರ ರಂಗ ಸಜ್ಜಿಕೆ ಶ್ಲಾಘನೀಯ.

ಮೂಲ ನಾಟಕಕಾರ ಮಾರುತಿ ರಾವ್ ತೆಲುಗು ರಂಗಭೂಮಿ ಮತ್ತು ಚಿತ್ರರಂಗದ ದಿಗ್ಗಜ. ಅವರ ಕಲಾ ಸೇವೆಗೆ ಆಂಧ್ರ ಸರ್ಕಾರ ನಂದಿ ಪ್ರಶಸ್ತಿಯಿಂದ ಗೌರವಿಸಿದೆ. ಈ ನಾಟಕ ದಿನಕರ ತಂಡದ ಮೂಲಕ ನಿರ್ದೇಶಕ ಶಿವಾನಂದ ಇಂಗಳೇಶ್ವರ ಅವರು ನೀಡಿದ ಮರೆಯಲಾಗದ ಇನ್ನೊಂದು ರಂಗಪ್ರಸ್ತುತಿ.

## ಬಾಗಿಲು

ಹುಟ್ಟು ಆಕಸ್ಮಿಕ, ಬದುಕು ಓರೆಕೋರೆಗಳ ಜಂಜಡ, ಸಾವು ನಿಶ್ಚಿತ. ಇದು ಮಾನವಜೀವಿಯ ಕಾಲಚಕ್ರ. ಆಧುನಿಕ ಯಾಂತ್ರಿಕ ಜೀವನಶೈಲಿ ಮತ್ತು ಮಾನುಷ್ಯತ್ವದ ಮೇಲಿನ ಅದರ ಪರಿಣಾಮ. ಜೀವನದ ಯಶಸ್ಸು ಇಂದು ಧನ, ಅದರಿಂದ ಎಲ್ಲವನ್ನೂ ಪಡೆಯುವ ಭ್ರಮೆ. ಅದರ ಹಿಂದೆ ನಾಗಲೋಟದ ಓಟ. ನೆಂಟನಂತೆ ಬರುವ ಸಾವು ಯಾರಿಗು ಗೋಚರವಾಗದ ಮತ್ತು ರೂಪವಿಲ್ಲದ ಕಟು ಸತ್ಯ 'ಬಾಗಿಲು' ನಾಟಕ ಮೇಲಿನ ಸಾರಾಂಶದ ಆಧಾರದ ಮೇಲೆ ಕ್ಷಣ ಕ್ಷಣಕ್ಕೂ ಕುತೂಹಲ ಮೂಡಿಸುತ್ತ ಸಾಗುತ್ತದೆ. ಚಿ. ಶ್ರೀನಿವಾಸ ರಾಜು ರಚಿತ 'ಬಾಗಿಲು' ನಾಟಕದ ನೈಜ ಅಭಿನಯದ ತಾರಗಣದಲ್ಲಿ ರವಿಕುಮಾರ್, ಶ್ರೀಮತಿ ಮಂಜುಳಾ ನಾಗರಾಜ, ಸಂತೋಷ್ ಉಪಾಧ್ಯಾಯ, ರಂಗನಾಥ ಸಿಂಗಾರಿ, ಹೆಚ್.ಎಸ್. ಜಗದೀಶ್.

ರಂಗ ಸಜ್ಜಿಕೆ: ಶ್ರೀ ಸುಧೀರ್ ಫಡ್ನೀಸ್ (2016ರ ಬಾಟಿಕ್ ಚಿತ್ರಕಲೆ ರಾಷ್ಟ್ರ ಪ್ರಶಸ್ತಿ ವಿಜೇತರು), ವಿನ್ಯಾಸ ಮತ್ತು ನಿರ್ದೇಶನ : ಶಿವಾನಂದ ಇಂಗಳೇಶ್ವರ ಅ

***ಡಾ. ವೈ. ಅವನೀಂದ್ರನಾಥ್ ರಾವ್***





# ಕಂಡ ಕನಸನ್ನ ನನಸಾಗಿಸಿದ ಕಾಣದ ಕಣ್ಣು

ಪಂಚೇಂದ್ರಿಯಗಳಲ್ಲಿ ಹೆಚ್ಚಿನ ಮಹತ್ವ ಪಡೆದ ಕಣ್ಣು, ತೆಲುಗು ಮೂಲದ ಗೊಲ್ಲಪುಡಿ ಮಾರುತಿ ರಾವ್ ಅವರ ನಾಟಕದಲ್ಲಿ ನಮ್ಮನ್ನ ಬೇರೆಯೇ ಲೋಕಕ್ಕೆ ಒಯ್ಯುತ್ತದೆ. ಭೌತಿಕ ಮತ್ತು ಆಧ್ಯಾತ್ಮಿಕ ಒಳನೋಟಕ್ಕೊಂದು ವಸ್ತುವಾಗಿರುವ 'ಕಣ್ಣು' ನಾಟಕವನ್ನು ಪ್ರಸ್ತುತಪಡಿಸಿದ ಇಂಗಳೇಶ್ವರ ನೇತೃತ್ವದ ದಿನಕದ ತಂಡ ಒಂದು ಪ್ರಭಾವೀ ನಾಟಕವನ್ನು ಪ್ರಸ್ತುತಪಡಿಸುವಲ್ಲಿ ಯಶಸ್ವಿಯಾಗಿದೆ.

ಪ್ರತಿಯೊಬ್ಬ ಕಲಾವಿದರಿಗಾಗಿ ತಮ್ಮ ಪ್ರತಿಭೆ ತೋರಲು ಅವಕಾಶ ಇರುವ ಈ ನಾಟಕಕ್ಕೆ ನ್ಯಾಯ ನೀಡಿದ ಎಲ್ಲ ಕಲಾವಿದರೂ ಅಭಿನಂದನಾರ್ಹರು. ನಾಟಕದ ಆದಿಯಿಂದ ಅಂತ್ಯದವರೆಗೆ ಎಲ್ಲೂ ಸೋಲದಂತೆ ಕಾಪಿಟ್ಟ ಸೀತಾ ಪಾತ್ರವನ್ನು ವಹಿಸಿದ ವಿದ್ಯಾ ನಾರಾಯಣ ಭಟ್ ಒಬ್ಬ ವೃತ್ತಿಪರ ನಾಟಕಕಾರರ ಛಾಯೆಯನ್ನು ಬೀರಿದ್ದರಲ್ಲಿ ಸಂದೇಹವಿಲ್ಲ. ಕುರುಡಿ ಆಗಿಯೇ ನಾಟಕದುದ್ದಕ್ಕೂ ಎಚ್ಚರಿಕೆಯಿಂದ ನಟಿಸುತ್ತ, ಕಾಣುವ ಪ್ರಪಂಚದಲ್ಲಿ ಇರುವ ಆತಂಕಗಳನ್ನು ಪ್ರೇಕ್ಷಕರಿಗೆ ಮನದಟ್ಟು ಮಾಡಿದ್ದಾರೆ. ಹೊರಗಣ್ಣನ್ನು ಮರಳಿ ಪಡೆದು ಒಳಗಣ್ಣನ್ನು ಕಳೆದುಕೊಂಡ ತನ್ನ ಸಹ-ಭಿಕ್ಷುಕನಲ್ಲಿ ರಂಗನಲ್ಲಿ ಕೇಳುವ ಮಾತು ಇಡೀ ನಾಟಕದ ಒಳ ತಿರುಳನ್ನು ಬಿಚ್ಚಿಡುತ್ತದೆ.

ಪೇದೆಯ ಪಾತ್ರಕ್ಕೆ ತೂಕ ತುಂಬಿದ ಎ.ಟಿ. ಶ್ರೀನಿವಾಸ್, ಅನುಕರಣೀಯವಾಗಿ ನಟಿಸಿದ ಕುಮಾರ್, ತನ್ನ ಅದ್ಭುತ ಕಂಠದಿಂದಲೇ ಕುರುಡನೂ ಸ್ಥಾಯೀ ಭಾವವನ್ನು ನಿರಂತರವಾಗಿ ಪೋಷಿಸಿದ ಸಂಗಪ್ಪ ವಗ್ಗರ್, ಮಿಂಚಲು ಹೆಚ್ಚು ಸಮಯ ಬೇಡ ಎಂಬುದನ್ನು ತೋರಿಸಿಕೊಟ್ಟ ಸಿಂಹಾಚಲಂ ಪಾತ್ರವಹಿಸಿದ ಬಿ. ನಾರಾಯಣ. ದೆಹಲಿಯ ಶ್ರೇಷ್ಠ ನಾಟಕ ಕಲಾವಿದರು ಎಂಬುದನ್ನು ಸಾಬೀತು ಪಡಿಸಿದ್ದಾರೆ ಅನ್ನುವುದು ಸತ್ಯ.

ದೆಹಲಿಯ ಉತ್ತಮ ರಂಗಕರ್ಮಿ ಎಂದೇ ಹೆಸರಾದ ಮೈಲಾರಪ್ಪ ರಂಗನಾಗಿ ಸಮರ್ಥ ನಿರ್ವಹಣೆ ಮಾಡಿದ್ದಾರೆ. ಆದರೆ, ನವರಸಗಳಲ್ಲಿ ಬಹುತೇಕ ರಸಗಳ ಅಭಿವ್ಯಕ್ತೀಕರಣಕ್ಕೆ ಹೆಚ್ಚಿನ ಅವಕಾಶ ಇತ್ತು ಎಂಬುದನ್ನು ಅಲ್ಲಗಳೆಯುವಂತಿಲ್ಲ. ಹಾಸ್ಯರಸಕ್ಕೆ ಬಂದಾಗ ಅವರದ್ದು ಸದಾ ಮೇಲುಗೈ, ಅವರ ವ್ಯಕ್ತಿತ್ವ ಮತ್ತು ಧ್ವನಿ ಅವರ ಪಾತ್ರವನ್ನು ಸುಲಭದಲ್ಲಿ ನಿರ್ವಹಿಸುವಂತೆ ಮಾಡಿದ್ದವು. ಕುರುಡರ ನಟನೆಯ ಮುಂದೆ ಸಂಗೀತ ಸೋತಂತೆ ಅನಿಸಿತ್ತು. ಕನ್ನಡೇತರರಿಗೂ ಅಳವಡಿಸಿದ್ದ ಇಂಗ್ಲಿಷ್ ಸಬ್ ಟೈಟಲ್ ಹೊಂದಾಣಿಕತೆಯ ಗೊಂದಲ ಹಾಗೂ ಆಗಾಗ ಬದಲಾಗುವ ಸ್ಲೈಡ್‌ಗಳ ಬೆಳಕು, ನಾಟಕಕ್ಕೆ ನೀಡಿದ್ದ ಬೆಳಕಿನ ಸಂಯೋಜನೆಗೆ ಹಿತಕಾರಿ ಆಗಿರಲಿಲ್ಲ. ರಂಗಸಜ್ಜಿಕೆ ಹಾಗೂ ಚಲನ ನಿರ್ದೇಶನ ಉತ್ತಮವಾಗಿತ್ತು; ಅರ್ಥಪೂರ್ಣವಾಗಿತ್ತು. ಮೌನ ಸಂಗೀತವನ್ನು ಸಮರ್ಥವಾಗಿ ಬಳಸಿದ ವಿದ್ಯಾಭಟ್ ಅವರು, ತಮ್ಮ ಧ್ವನಿ ಪರಿಣತೆಯ ಸಂಪೂರ್ಣ ಪ್ರಯೋಜನ ಪಡೆದು ನಾಟಕ ನೆನಪಿನಾಳದಲ್ಲಿ ಉಳಿಯುವಂತೆ ಮಾಡಿದರು.

ಅರ್ಥಪೂರ್ಣ ನಾಟಕವನ್ನು ಕೈಗೆತ್ತಿಕೊಂಡು, ಯಶಸ್ವಿಯಾಗಿ ನಿರ್ದೇಶಿಸಿ ಕನ್ನಡಿಗರ ಮುಂದೆ ಪ್ರಸ್ತುತಪಡಿಸಿದ ಶಿವಾನಂದ ಇಂಗಳೇಶ್ವರ ಈ ನಾಟಕಕ್ಕೆ ಬೆಳಕು ನೀಡಿ ಕನ್ನಡ ಪ್ರೇಕ್ಷಕರ ಬೆಳಕಿಗೆ ತಂದಿದ್ದು ಶ್ಲಾಘನೀಯ. ಇಳಿವಯಸ್ಸಿನಲ್ಲೂ ಲವಲವಿಕೆಯಿಂದ ಇಂಗ್ಲಿಷ್ ಮಹಿಳೆಯ ಪಾತ್ರವಹಿಸಿದ ಡಾ. ಅಹಲ್ಯಾ ಚಿಂತಾಮಣಿಯವರ ಪರ್‌ಫೆಕ್ಟ್ ಇಂಡಿಯನ್ ಇಂಗ್ಲಿಷ್ ನಾಟಕದಲ್ಲಿ ಹೊಸದೊಂದು ಪ್ರಯೋಗಕ್ಕೆ ಹಾದಿ ಮಾಡಿಕೊಟ್ಟಿದೆ. ದೊರೆಸಾನಿಯಾಗಿ ಬಿ.ಕೆ. ಬಸವರಾಜು ಅವರೂ ಹಿತ-ಮಿತವಾಗಿಯೇ ನಟಿಸಿದ್ದರು. ಅ

*ಎಸ್. ಕೃಷ್ಣ ಭಟ್*


ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್ ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು. ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

**SAUJANYA**
PRINTING PRESS

A HOUSE OF QUALITY PRINTING

Office :
C-95, Okhla Industrial Area
Phase-I, New Delhi – 110 020

PHONE:
011-40520770

MOBILE:
9811104398,
9811604398

E-MAIL:
saujanyapp2010@gmail.com /
hpgp2006@gmail.com

Delhi Karnataka Sangha Abhimatha Monthly,
Oct -2018, Vol. No.29, Issue No.1, Price Rs.1/-
RNI Regn. No. 53405/91, DL-SW-1/4016/16-18
Date of Publication : Oct 8th / 9th, Posting Date :10th / 11th, Total Pages-20
Printed & Published by C.M. Nagaraja, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022, Tel: 26109615, Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Balakrishna Naik D.

# EMPOWERING YOUR ENTREPRENEURIAL DREAMS




**Timely finance for Micro, Small and Medium Enterprises that help their business grow.**

**Finance of upto ₹500 lakhs is given for**

- Working Capital requirements
- Establishment and / or improvement of the unit, repairs & renovations, acquiring machineries/vehicles/equipments/ any fixed assets for the unit
- Purchase/acquiring of property (shop/factory/ godown/office) for self use.

*Conditions apply

**For more information and to apply online, visit www.karnatakabank.com or step into our nearest branch for details.** Follow us on / karnatakabank

**Words of precaution to the public**

Governor, RBI or Bank or any such other organisation does not send mails or SMSs asking you to deposit money to transfer a larger sum of money to your account. Do not be a victim of such frauds.

Karnataka Bank
Your Family Bank. Across India.

Regd. & Head Office: Mangaluru- 575 002 CIN: L 85110KA1924PLC001128 E-mail: info@ktkbank.com visit us at: www.karnatakabank.com